
ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 2 ಸಂಚಿಕೆ : 15 ಆಗಸ್ಟ್ 1 ರಿಂದ 15–1998 ಪುಟಗಳು : 24 ರೂ. 5



ಈ ಮಹಾನ್ ಭರತ ಖಂಡಲಿ ಸತ್ಯ ಶಾಂತಿ
ಅಹಿಂಸೆ ಮತ್ತೆ ತ್ಯಾಗದ ಪ್ರತೀಕನೇ
ಈ ನಮ್ಮ ಸ್ವಾತಂತ್ರ್ಯ

ಇನ್ನ್ ಜೀವಂತ ಇರ್ವ ಬಡತನ,
ಅನಕ್ಷರತೆ, ಭ್ರಷ್ಟಾಚಾರ, ಭಾಷೆ
ಮತ್ತೆ ಲಿಂಗಭೇದ, ಮೂಡ ನಂಬಿಕೆನೆ
ಪ್ರಗತಿಯ ಮುಖ್ಯ ಸಮಸ್ಯೆಗ.

ಮತ್ತೆ ನಮ್ಮಲಿರ್ವ ಸಣ್ಣತನ, ಕೀಳರಿಮೆ,
ದ್ವೇಷ, ಮತ್ಸರ ಎಲ್ಲಾ ಬುಟ್ಟ್ ಮುಂದೆ ಪೋಯಿ.

ಹಂಗನೇ ಸಂಘಟಿತರಾಕಂಡ್, ಐಕ್ಯತೆಂದ, ಏಕತೆನ
ಸಾಧಿಸ್ಕಂಡ್, ಉದಾರವಾದಿ ಆಕಂಡ್ **21**ನೇ
ಶತಮಾನಕ್ಕೆ ನಾವೆಲ್ಲ ಒಟ್ಟಗೆ ಪೋಯಿತೇಳಿ
"ಕೊಡಗು ಸಂಗಾತಿ" ಮನಪೂರ್ವಕ ಹಾರೈಸಿದೆ.

ಅರೆಭಾಷಿಕರಾದ ನಾವು ಸನ 50 ನೇ ಸ್ವಾತಂತ್ರ್ಯ ಸುವರ್ಣ ಮಹೋತ್ಸವನ ಆಚರಿಸ್ತೊಳೊ.

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಗೌರವ ಸಂಪಾದಕ :
ಪಟ್ಟಡ ಎಂ. ಪ್ರಭಾಕರ

ಮುದ್ರಕರು :
ಮಣ್ಣಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,
180/ಎ, 6ನೇ ಮುಖ್ಯ ರಸ್ತೆ,
ವಿನಾಯಕನಗರ, ಮೈಸೂರು-12

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮಿಪುರಂ, ಮೈಸೂರು–12.
ಫೋನ್ : 516771

ಮಡಿಕೇರಿಯ ನಮ್ಮ ವಿಳಾಸ

ಕೊಡಗು ಸಂಗಾತಿ
C/o ನಂಗಾರ್ ಆಡಿಯೋ ವೀಡಿಯೊ
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ–571 201

ಒಳನೋಟ

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ

ಹಿಂದಿನ ಕಾಲದಲ್ಲಿ ಸಹಕಾರ ಸಂಘಗಳು ಸ್ಥಾಪನೆಯಾಗದಿದ್ದಾಗ ಸಾಹುಕಾರರೇ ಸಮಾಜವನ್ನಾಳುತ್ತಿದ್ದರು. ಅವರು ಹೇಳಿದ ಹಾಗೆ ಜನರು ಕೇಳಬೇಕಿತ್ತು. ಅವರ ಮೂಲಕವೇ ಊರಿನ ಎಲ್ಲಾ ವ್ಯವಹಾರಗಳು ನಡೆಯಬೇಕಿತ್ತು. ಬಡ ಮತ್ತು ವಿದ್ಯಾಹೀನ ಜನರು ಈ ಸಾಹುಕಾರರು ಹೇಳಿದ ಬಡ್ಡಿ, ಚಕ್ರಬಡ್ಡಿ, ಒಂದಕ್ಕೆರಡು, ಮೂರು ನಾಲ್ಕರಷ್ಟು ತೆತ್ತು, ಜೀವನವಿಡೀ ಸಾಹುಕಾರನ ದಾಸನಾಗಿರಬೇಕಾದ ಕಾಲವೊಂದಿತ್ತು. ನಂತರ ಸಹಕಾರ ಸಂಘಗಳು ಉಗಮವಾಗಿ ಸಾಹುಕಾರರ ಕಪಿಮುಷ್ಠಿಯಿಂದ ಬಿಡುಗಡೆ ಹೊಂದುವುದಕ್ಕೆ ತುಂಬಾ ಕಷ್ಟ ಪಡಬೇಕಾಗಿತ್ತು. ನಂತರ ಬ್ಯಾಂಕುಗಳು ಸಹ ಸಾಲ ಮಂಜೂರು ಮಾಡಲು ಮುಂದೆ ಬಂದವು. ಇವು ಸಾಮಾನ್ಯವಾಗಿ ಜನರ ಸಾಲ ತೀರಿಸುವುದಕ್ಕೆ ಮತ್ತು ಉತ್ಪತ್ತಿಯ ಅಭಿವೃದ್ಧಿಗೆ ಸಾಧ್ಯವಾದವು. ಕಾಫಿ, ಕಿತ್ತಳೆ, ಯಾಲಕ್ಕಿ ಮತ್ತು ಜೇನುಸಾಕಣೆಗೆ ಸಹಕಾರ ಸಂಘಗಳು ಮಾರಾಟದ ಸೌಲಭ್ಯಗಳನ್ನು ಒದಗಿಸಿ ಕೊಟ್ಟವು. ಆದರೆ ಕೊಡಗಿನಲ್ಲಿ ಬೆಳೆಯುವ ಬಾಳೆ, ನಿಂಬೆಹಣ್ಣು, ಕರಿಮೆಣಸು, ತರಕಾರಿ, ಹಾಲು, ಮೊಟ್ಟೆ, ಕಾಡು ಮಾವಿನ ಕಾಯಿ, ಕಾಡು ಮಾವಿನಹಣ್ಣು, ಹೆರಳೆ [ಹೊಟ್ಟಳಿ] ಪಣಪುಳಿ, ಶುಂಠಿ, ಅರಿಸಿನ ಮುಂತಾದ ಫಲಗಳನ್ನು ಶೇಖರಿಸಲು ಹವಾನಿಯಂತ್ರಿತ ದಾಸ್ತಾನು ಮಳಿಗೆಗಳು, ಅವುಗಳನ್ನು ಬೆಳೆಗಾರರಿಂದ ನೇರವಾಗಿ ಖರೀದಿಸಿ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುವ ಸಹಕಾರ ಸಂಘಗಳು ಕೊಡಗಿನಲ್ಲಿಲ್ಲ. ಬೆಳೆದುದಕ್ಕೆ ತಕ್ಕ ಕ್ರಯ ಸಿಗದಿರುವುದರಿಂದ ಇಂತಹ ಜನರು ತಮ್ಮಲ್ಲಿ ಬಹಳ ಕಡಿಮೆ ಇರುವ ವಸ್ತುಗಳಿಗಾಗಿ ಪೇಟೆ ಪಟ್ಟಣಗಳಿಗೆ ಹೋಗಿ ಪ್ರಯಾಸಪಟ್ಟು ಇಡೀ ದಿನವನ್ನು ಹಾಳುಮಾಡಬೇಕಾದುದರಿಂದ ಇಂತಹ ವಸ್ತುಗಳು ಬೆಳೆದರೂ ಅವುಗಳನ್ನು ಶೇಖರಿಸಿ ಮಾರುಕಟ್ಟೆಗೆ ಒಯ್ಯುವ ಮನಸ್ಸೇ ಇಲ್ಲದಂತಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಲಬಾರು ಪ್ರದೇಶಗಳಲ್ಲಾದರೆ ಇಂತಹ ಪದಾರ್ಥಗಳನ್ನು ನೇರವಾಗಿ ರೈತರಿಂದ ಕೊಂಡು ಅದೇ ಸಂಜೆಯೊಳಗೆ ಪದಾರ್ಥಗಳಿಗೆ ತಕ್ಕ ಹಣ ಸಿಗುವ ಏರ್ಪಾಡುಗಳಿವೆ. ಆದರೆ ಕೊಡಗಿನಲ್ಲಿ ಇಂತಹ ವಸ್ತುಗಳನ್ನು ಮಾರಾಟ ಮಾಡುವ ಏರ್ಪಾಡೇ ಇಲ್ಲವಾಗಿ ಜನರಿಗೆ ಇಂತಹ ವಸ್ತುಗಳ ಉತ್ಪನ್ನಗಳ ಮೇಲೆ ಜಿಗುಪ್ಸೆ ಬಂದಿದೆ. ಎಲ್ಲಾದರೂ ಉತ್ಪಾದಿಸಿದ್ದು ಇದ್ದರೆ ಅಲ್ಲಲ್ಲಿ ಇರುವ ದಳ್ಳಾಳಿಗಳು ಬಹಳ ಕಡಿಮೆ ಬೆಲೆಗೆ ವಿಕ್ರಯಿಸಿ ಈ ವಸ್ತುಗಳನ್ನು ಹೊಂದಿದವರಿಗೆ ಹೆಚ್ಚಿನ ಹಣ ಸಿಗದೇ ಹೋಗುತ್ತಿದೆ. ನಮ್ಮ ಜನರಲ್ಲಿ ಈ ವಿಷಯದಲ್ಲಿ ಒಗ್ಗಟ್ಟಿಲ್ಲದೆ ಅಸಡ್ಡೆ

ಸಹಕಾರಿ ಆಂದೋಲನ

ಭಾವನೆ ಬಂದಿದೆ. ಕಾಫಿ ತೋಟ ಮತ್ತು ಕಾಡುಗಳಲ್ಲಿ ಹೇರಳವಾಗಿ ಮಾವಿನಕಾಯಿ, ಹಲಸಿನ ಕಾಯಿ, ಹಲಸಿನ ಹಣ್ಣು ಬಿದ್ದು ಕೊಳೆತು ನಾಶವಾಗುವುದನ್ನು ತಪ್ಪಿಸಿ ಆಯಾಯ ಕಾಲದಲ್ಲಿ ಸಿಗುವ ಇಂತಹ ಫಲಗಳನ್ನು ಶೇಖರಿಸಿ ಉಪ್ಪಿನಕಾಯಿ ರಸಾಯನ, ಹಪ್ಪಳ ಸಂಡಿಗೆಗಳನ್ನು ತಯಾರಿಸಿ ದೂರದ ಪಟ್ಟಣಗಳಿಗೆ ರವಾನಿಸಿ ಮಾರಾಟ ಮಾಡಿದರೆ ಇದೊಂದು ಉಪಕಸುಬಾಗಿ ಹಣತರುವ ಒಂದು ಮೂಲವೂ ಆಗಬಹುದು. ಇಂತಹ ಉದ್ಯಮಗಳನ್ನು ತೊಡಗಲು ಊರಿನ ಬೆಳೆಗಾರರು ಸಹಕಾರ ಸಂಘಗಳನ್ನು ತೆಗೆಯಬೇಕು. ಇದರಿಂದಾಗಿ ವಿದ್ಯಾವಂತ ಯುವಕ ಯುವತಿಯರಿಗೆ ಉಪಕಸಬನ್ನು ನಿರ್ಮಿಸಿದಂತಾಗುತ್ತದೆ. ನಿರುದ್ಯೋಗದಿಂದ ತತ್ತರಿಸುತ್ತಿರುವ ಯುವಕ ಯುವತಿಯರಿಗೊಂದು ದಾರಿಯಾಗುವುದು. ಹಿಡುವಳಿ ಚಿಕ್ಕದಾದರೂ ತಮ್ಮ ಉತ್ಪತ್ತಿಗಳನ್ನು ಹೆಚ್ಚಿಸುವುದಕ್ಕೆ ಒಂದು ದಾರಿಯಾದೀತು.

ಹಿಂದಿನ ಕಾಲದಲ್ಲಿ ನಮ್ಮ ಜನರು ಹೇರಳವಾಗಿಲ್ಲದಿದ್ದರೂ ತಮ್ಮ ಸಂತೆ ಖರ್ಚಿಗಾಗಿ ತರಕಾರಿಯನ್ನು ಬೆಳೆಸುತ್ತಿದ್ದರು. ಸಂತೆಗಾಗಿ ತಾವು ಬೆಳೆಸಿದ ವಸ್ತುಗಳನ್ನು ಮಾರುವುದಕ್ಕಾಗಿ ತಲೆ ಹೊರೆಯಲ್ಲಿ 20-30 ಮೈಲಿಗಳ ದೂರದಿಂದ ಬರುತ್ತಿದ್ದರು. ಈಗ ಅದನ್ನು ಬಿಟ್ಟು ತರಕಾರಿಯನ್ನೂ ಸಂತೆಯಿಂದ ಕೊಂಡು ತರುತ್ತಿದ್ದಾರೆ. ತರಕಾರಿ ಬೆಳೆಸುವುದು ಒಂದು ಕಡಿಮೆ ತರದ ವೃತ್ತಿ ಎಂಬ ಭಾವನೆ ಬಂದು ಹೋಗಿದೆ. ಈ ವಿಷಯದಲ್ಲಿ ಕೇರಳದ ಜನರನ್ನು ನಾವು ನೋಡಿ ಕಲಿಯುವುದು ಅದೆಷ್ಟೋ ಇದೆ ಒಂದು ಏಕ್ರೆ ಸ್ಥಳದಲ್ಲಿ ಎಂಟು ಹತ್ತು ವಿಧದ ಬೆಳೆಗಳನ್ನು ಬೆಳೆಸುತ್ತಿದ್ದಾರೆ. ಹೀಗಾಗಿ ಅವರ ಆರ್ಥಿಕ ಸ್ಥಿತಿಯು ಬಹಳ ಉನ್ನತ ಮಟ್ಟದಲ್ಲಿದ್ದು, ಕರ್ನಾಟಕದಲ್ಲಿ ಎಲ್ಲಾ ಊರುಗಳಲ್ಲಿ ಕೇರಳಿಯರು ತಮ್ಮ ಜೀವನವನ್ನು ಮಾಡುತ್ತಿದ್ದಾರೆ. ಆಯಾಯ ಸ್ಥಳದಲ್ಲಿ ನೆಲಸಿರುವ ಜನರಿಗಿಂತ ಉತ್ತಮ ಮಟ್ಟದ ಜೀವನವನ್ನು ನಡೆಸುತ್ತಿದ್ದಾರೆ.

ಆದ್ದರಿಂದ ನಮ್ಮ ಸಮಾಜದ ಯುವಕ/ಯುವತಿಯರು ಮೇಲೆ ವಿವರಿಸಿದಂತೆ ಏಕೆ ಸಂಘಗಳನ್ನು ಸ್ಥಾಪಿಸಿ, ನಮ್ಮ ಊರುಗಳಲ್ಲಿ ಉತ್ಪಾದನೆಯಾಗುವ ವಸ್ತುವು ಹಾಳಾಗದಂತೆ ನಮ್ಮ ಆರ್ಥಿಕ ಅಭಿವೃದ್ಧಿಯನ್ನೇಕೆ ಮಾಡಬಾರದೆಂದು ಸಂಗಾತಿ ನಮ್ಮ ಯುವಕ/ಯುವತಿಯರನ್ನು ಕೇಳುತ್ತಿದೆ. ○

ಸಮಾಜ ಚಿಂತಕ ಚೇಂದ್ರಿಮಾಡ ಮುತ್ತಪ್ಪ, ಕುಶಾಲನಗರ

'ಕೊಡಗು ಸಂಗಾತಿ ಪತ್ರಿಕೆ'ಯಲ್ಲಿ ಲೇಖನ, ವ್ಯಕ್ತಿಪರಿಚಯದ ಮೂಲಕ ಪರಿಚಯಿಸಿ ಬಂದ, ಹಿರಿಯ ಕೊಡವ ಚಿಂತನಕಾರ. ಸಂಗಾತಿಯು ಜನಾಂಗದ ಅಭ್ಯುದಯ ಬಯಸಿ ಹೊರಬಂದ ಪ್ರಾರಂಭದಲ್ಲಿ ತಮ್ಮ ಲೇಖನದ ಮೂಲಕ ಪ್ರೇರಣೆಯಿತ್ತಿದ್ದಾರೆ. ಕೊಡಗಿನ ಗಾಳಿ, ನೆಲ, ಜಲವನ್ನು ಗಾಢವಾಗಿ ಪ್ರೀತಿಸುವ, ಕೊಡಗಿನ ಬಗ್ಗೆ ಸಾಕಷ್ಟು ಚಿಂತಿಸುವ, ಪ್ರಮುಖ ಜನಾಂಗಗಳು ಸೌಹಾರ್ದಯುತ ಬಾಳುವೆ ನಡೆಸುವಂತೆ ಪ್ರೇರೇಪಿಸುತ್ತಿರುವ ಇವರ ಮಾರ್ಗದರ್ಶನ ನಮ್ಮ ಕಿರಿಯರಿಗೆ ಲಭಿಸಲಿ. ಅಲ್ಲದೆ ಈಗ ತಾನೇ ಇಳಿವಯಸ್ಸಿನಲ್ಲಿ ಅರೆಭಾಷೆಯನ್ನು ಕಲಿಯುತ್ತಿರುವುದು ಮೆಚ್ಚತಕ್ಕದ್ದು.

—ಸಂಪಾದಕಿ

ಚೇಂದ್ರಿಮಾಡ ಪೊನ್ನಪ್ಪ ಗಣಪತಿ [ಅಪ್ಪಣ್ಣ] ಮತ್ತು ಸೋಮವ್ವ [ಅಕ್ಕಿ] ದಂಪತಿಗಳ ಪುತ್ರನಾಗಿ 4-3-1925ರಲ್ಲಿ ವಿರಾಜಪೇಟೆ ತಾಲ್ಲೂಕಿನ ಕಲತೋಡು [ನಾಂಗಾಲ] ಗ್ರಾಮದಲ್ಲಿ ಜನಿಸಿದರು. ಇವರ ತಾಯಿ ಚೆಂಬೆಬೆಳ್ಳೂರು ಗ್ರಾಮದ ಚೇಂದಂಡ ಬೆಳ್ಯಪ್ಪನವರ ಪುತ್ರಿ.

ಇವರು ತಮ್ಮ ಬಾಲಶಿಕ್ಷಣವನ್ನು ಸರಕಾರಿ ಕಿರಿಯಶಾಲೆ ಕಲತೋಡುನಲ್ಲಿ ಮಾಡಿದರು. ಮಡಿಕೇರಿಯ ಮಹದೇವಪೇಟೆಯಲ್ಲಿರುವ ಆಂಗ್ಲೋವರ್ನೇಕ್ಯೂಲರ್ ಶಾಲೆಯಲ್ಲಿಯೂ, 2ನೇ ಮತ್ತು 4ನೇ ಕ್ಲಾಸನ್ನು ಪೊನ್ನಂಪೇಟೆಯ ಸರಕಾರಿ ಶಾಲೆಯಲ್ಲಿಯೂ, 4ನೇ ಫಾರಂನಿಂದ 6ನೇ ಫಾರಂ ತನಕ [SSLC] ಸೆಂಟ್ರಲ್ ಹೈಸ್ಕೂಲ್ ಮಡಿಕೇರಿಯಲ್ಲಿಯೂ, ಇಂಟರ್‌ಮಿಡಿಯೇಟ್ ಅನ್ನು ಮೈಸೂರಿನ ಸೈಂಟ್ ಫಿಲೋಮಿನಾ ಕಾಲೇಜಿನಲ್ಲಿಯೂ ಮೂರುವರೆ ವರ್ಷ ಡಿಪ್ಲೋಮ ಇನ್ ಆಟೋಮೊಬೈಲ್ ಇಂಜಿನಿಯರಿಂಗ್ ಅನ್ನು ಕರ್ನಾಟಕ ಪಾಲಿಟೆಕ್ನಿಕ್ ಮಂಗಳೂರಿನಲ್ಲಿಯೂ, 1949ರಲ್ಲಿ ಮಾಡಿ, 6 ತಿಂಗಳ ಅಪ್ರೆಂಟಿಸ್ ಅನ್ನು ಮದ್ರಾಸ್ ಸರಕಾರ



ಚೇಂದ್ರಿಮಾಡ ಮುತ್ತಪ್ಪನವರು

ಸಾರಿಗೆ ಇಲಾಖೆಯಲ್ಲಿ ಎಕ್ಸ್‌ಪರ್ಟ್ ಫಿಟ್ಟರ್ ಆಗಿ ಮುಗಿಸಿ, 1950ನೇ ಇಸವಿಯಲ್ಲಿ ಹೈದರಾಬಾದಿನ ಕೃಷಿ ಇಲಾಖೆಯಲ್ಲಿ ಸಹಾಯಕ ಮೆಕಾನಿಕಲ್ ಸೂಪರ್‌ವೈಸರ್‌ರಾಗಿ ಸೇರಿದರು. 1955ರ ತನಕ ಹೈದರಾಬಾದ್ ಸರಕಾರ ನಾಂದೇಡ್, ಪರ್‌ಭನಿ ಜಿಲ್ಲೆಯಲ್ಲಿ ಸೇವೆಯನ್ನು ಸಲ್ಲಿಸಿದರು.

1955ರಲ್ಲಿ ಕೊಡಗಿನ ಮಂತ್ರಿಗಳಾದ ಕೆ. ಮಲ್ಲಪ್ಪನವರು ಹೈದರಾಬಾದಿಗೆ ಭೇಟಿ ನೀಡಿದ್ದರು. ಆಗ ಹೈದರಾಬಾದಿನ ಮುಖ್ಯಮಂತ್ರಿ ಬಿ. ರಾಮಕೃಷ್ಣರಾವ್ ಇವರು ಯಾಂತ್ರೀಕೃತ ಕೆಲಸ ಮಾಡಿಸುತ್ತಿರುವ ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲಿಸಿದ ನಂತರ ಇವರ ಪರಿಚಯ ಮಲ್ಲಪ್ಪನವರಿಗೆ ಆಗೀ ಆ ಕ್ಷಣದಲ್ಲಿಯೇ ಇವರನ್ನು ಕೊಡಗಿಗೆ ಬೇಕೆಂದು ಕೇಳಿಕೊಂಡರು. ಮುಖ್ಯಮಂತ್ರಿ ಒಪ್ಪಲಿಲ್ಲ. ಒಳಗೆ ಏನಾಯಿತೋ ಏನೋ 1956ರಲ್ಲಿ [6 ತಿಂಗಳ ನಂತರ] ಇವರನ್ನು ಕೊಡಗು ಸರಕಾರಕ್ಕೆ ವರ್ಗಾವಣೆ ಮಾಡಲಾಯಿತು.

ಕೊಡಗಿನ ಕೂಡಿಗೆ ಫಾರಂನಲ್ಲಿ ಮೆಕಾನಿಕಲ್ ಫೋರ್‌ಮೇನ್ ಆಗಿ ಕೆಲಸ ನಿರ್ವಹಿಸಿ ವರ್ಕ್‌ಶಾಪನ್ನು ಸ್ಥಾಪಿಸಿದರು. ಆದರೆ ಅವರನ್ನು ಯಾವ ಉದ್ದೇಶಕ್ಕೆ ಕರೆಸಿಕೊಂಡರೋ ಆ ಉದ್ದೇಶ ಸಫಲವಾಗಲಿಲ್ಲ. ಏಪ್ರೀಲ್ 15, 1956ರಲ್ಲಿ ಗೃಹಲಕ್ಷ್ಮಿಯಾಗಿ ಮನೆಯಪಂಡ ಎಸ್. ಮಾದಪ್ಪನವರ ಏಕೈಕ ಪುತ್ರಿ ಲೀಲಾಳನ್ನು ವರಿಸಿದ ಇವರಿಗೆ ಒಂದು ಹೆಣ್ಣು, ಒಂದು ಗಂಡು ಮಕ್ಕಳಿದ್ದಾರೆ.

1958ರಲ್ಲಿ ಕೂಡಿಗೆಯಿಂದ ಬೆಂಗಳೂರಿಗೆ ವರ್ಗಾವಣೆಯಾದಾಗ ಇವರು ಅಲ್‌ಸರ್‌ನಿಂದ ನರಳುತ್ತಿದ್ದರು. ಶಸ್ತ್ರಚಿಕಿತ್ಸೆ ಒಂದೇ ಮಾರ್ಗ. ಅದಕ್ಕೆ ಹೆದರಿದ ಈ ದಂಪತಿಗಳು ಪುಟ್ಟಪರ್ತಿ ಸತ್ಯಸಾಯಿ ಬಾಬರವರನ್ನು ಸಂಪರ್ಕಿಸಿದರು. ಸಾಯಿಬಾಬರು ವಿಭೂತಿ ಕೊಟ್ಟು ಇವರನ್ನ ಶಸ್ತ್ರಚಿಕಿತ್ಸೆ ಇಲ್ಲದೆ ಗುಣಪಡಿಸಿದರು. ಅಲ್ಲಿಂದ ಇವರಿಬ್ಬರೂ ಆಧ್ಯಾತ್ಮಿಕಕ್ಕೆ ತಿರುಗಿದರು.

ಬೆಂಗಳೂರಿನಿಂದ ರಾಯಚೂರು, ಬಳ್ಳಾರಿ, ಗುಲ್ಬರ್ಗ, ಬೀದರ್‌ಗೆ ಅಸಿಸ್ಟೆಂಟ್ ಇಂಜಿನಿಯರ್ ಆಗಿ ವರ್ಗಾವಣೆ ಆದರು. ನಂತರ ಬಿಜಾಪುರಕ್ಕೆ full Fleged Assit Engineer ಗೆಜೇಟೆಡ್ ಹುದ್ದೆ. ಅಲ್ಲಿಂದ ಅಲಹಾಬಾದಿಗೆ ಸಂಶೋಧನಾ ತರಬೇತಿ, ನಂತರ 1969ರಲ್ಲಿ ಮೈಸೂರು ಸರಕಾರದಿಂದ ಹೆಚ್ಚಿನ ವ್ಯಾಸಂಗಕ್ಕಾಗಿ USSR Moscowಕ್ಕೆ ಕಳುಹಿಸಿದರು. ವಾಪಸ್ ಬಂದ ನಂತರ ಡಿವಿಜನಲ್ ಅಗ್ರಿಕಲ್ಚರಲ್

ಇಂಜಿನಿಯರ್ ಆಗಿ ಗುಲ್ಬರ್ಗ ಡಿವಿಜನಲ್‌ಗೆ ಪ್ರಮೋಶನ್. Class Ist officer ಆಗಿ ನಂತರ ರಾಜ್ಯ ಲ್ಯಾಂಡ್ ಡೆವೆಲಪ್‌ಮೆಂಟ್ ಇಂಜಿನಿಯರ್ ಆಗಿ ಬಡ್ತಿ. ಇಲ್ಲಿ Agricultural mini work shop ಗೆ ಇವರನ್ನು ಮೇನೆಜರ್ ಆಗಿ ನೇಮಕ. ಅಲ್ಲಿಂದ 1980ಕ್ಕೆ 55ವರ್ಷ ಪ್ರಾಯದಲ್ಲಿ ನಿವೃತ್ತಿ.

ಬಿಜಾಪುರದಲ್ಲಿ ಬೇಂದ್ರೆ ಮತ್ತು ಡಾ|| ಗೋಕಾಕರ ಪರಿಚಯ. ಅಲ್ಲಿಂದ ಲೇಖನ ಬರೆಯುವುದನ್ನು ಕಲಿಸಿಕೊಟ್ಟರು. ಬಿಜಾಪುರದಲ್ಲಿ ಬಾಲವಿಕಾಸವನ್ನು 1968ರಲ್ಲಿ 8 ಮಕ್ಕಳಿಂದ ಸ್ಥಾಪಿಸಿದರು. ಇಂದು ಹೈಸ್ಕೂಲಾಗಿ ಬೆಳೆದಿದೆ. ಸ್ಥಾಪಿಸಿ 25 ವರ್ಷದ ನಂತರ ಇವರನ್ನು ಬಿಜಾಪುರಕ್ಕೆ ಕರೆಸಿಕೊಂಡು ಸನ್ಮಾನ ಮಾಡಿದರು. ನಂತರ ಉತ್ತಮ ಬರಹಗಾರನೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು. ಕುಶಾಲನಗರದಲ್ಲಿ ಸನ್ಮಾನಿಸಿದರು. 1997 ಮೈಸೂರು ದಸರಾ ಕವಿಗೋಷ್ಠಿಯಲ್ಲಿ "ಕೊಡವ ಕವಿ" ಯಾಗಿ ಸನ್ಮಾನಿಸಿಕೊಂಡ ಹಿರಿಯ.

ಇಂದು ಒಂಟಿ ಜೀವನ ಪುಸ್ತಕಗಳು ಲೇಖನಿಗಳೇ ಇವರ ಸಹಪಾಠಿಗಳು. ಇವರೊಬ್ಬ ಬರಹಗಾರ, ಭಾಷಣಕಾರ, ಚಿಂತನಕಾರ ಹಾಗೂ AIR ಭಾಷಣಕಾರರಾಗಿದ್ದಾರೆ. ಕೊಡಗಿನ ಬಗ್ಗೆ, ಚಿಂತೆ, ಸ್ವಾಭಿಮಾನಕ್ಕಾಗಿ ಪರದಾಟ, ಐಕ್ಯತೆಗಾಗಿ ಶ್ರಮಿಸುವಿಕೆ, ಜಾತಿ ಪಂಗಡಗಳನ್ನು ಒಂದುಗೂಡಿಸುವಿಕೆಗೆ ಒತ್ತು ಕೊಡುತ್ತಿರುವ ಜಿಲ್ಲೆಯ ಹಿರಿಯ ಚಿಂತಕರು. 2 ಜನಾಂಗದ ಬಾಂದವ್ಯದ ಬಗ್ಗೆ ಸಾಕಷ್ಟು ಕಾಳಜಿ ವಹಿಸಿ ಸಂಗಾತಿಯನ್ನು ಪ್ರೀತಿಸಿ, ಅರಸಿ ಬಂದ ಪ್ರಥಮ ಕೊಡವ ಲೇಖಕರು ಸಹ ಹೌದು. ಸಂಗಾತಿಗೆ ಬರೆದು ಕಳುಹಿಸಿದ ಪತ್ರದ ಸಾರಾಂಶವನ್ನು ಯಥಾವತ್ತಾಗಿ ನೀಡಲಾಗಿದೆ. ಕೊಡಗಿನ ಜನ, ನೆಲದ ಬಗ್ಗೆ ಅಪಾರ ಪ್ರೀತಿ ಇರುವ ಅವರ ಮಾತುಗಳಲ್ಲೇ ಕೇಳೋಣ.

ಕೊಡಗಿನ ಮಣ್ಣು, ಜಲ, ಗಾಳಿ, (ಪವಿತ್ರವಾದದ್ದು) ಶುದ್ಧವಾಗಿರಬೇಕು. ಕೊಡಗಿನ ವಾಸಿಗಳೆಲ್ಲಾ ಒಂದೇ ತಂದೆ (ದೇವರ) ಮಕ್ಕಳಾಗಬೇಕು. ಸ್ವಾಭಿಮಾನವ ಬದುಕು ಬೇಕು. ಗುಲಾಮರಾಗಿ ಬದುಕುವುದಕ್ಕಿಂತ ಸ್ವಾಭಿಮಾನದ ಮರಣ ಲೇಸು.

ಹೇ ಭಗವಂತಾ ನನ್ನ ಕೊಡಗು, ಜನ್ಮ ಕೊಡಗು, ಒಮ್ಮತ, ಒಗ್ಗಟ್ಟಿನ ನಾಡು. ಕೊಡವ, ಗೌಡರೆಂಬ ಬೇದ ಸಲ್ಲದು. ಇಬ್ಬರಲ್ಲಿ ಸಹನೆ, ಸಹಬಾಳ್ವೆ, ನೆಂಟಸ್ಥನ ಬೆಳೆಯಲಿ, ನನ್ನ ಕೊಡಗಿಗೆ ಇದೊಂದನ್ನು ಕರುಣಿಸು.

ಇದೇ ನನ್ನ ಅಂತರಾಳದ ಪ್ರಾರ್ಥನೆ. ಹಿಂದಿನದನ್ನು ಕೆದಕುವುದು ಬೇಡ. ಮುಂದಿನ ಪೀಳಿಗೆಯ ಭವಿಷ್ಯವನ್ನು ಚಿಂತಿಸುವ. ● **ಪಟ್ಟಡ ಪ್ರಭಾಕರ್**

ಓದುಗರಿಗೊಂದು ಸಂತೋಷದ ಸುದ್ಧಿ

ಪ್ರಿಯ "ಕೊಡಗು ಸಂಗಾತಿ" ಓದುಗರಿಗೆ ಇದೊಂದು ಸಂತೋಷದ ಸುದ್ಧಿ. ನಮ್ಮ ಈ ಸಂಗಾತಿಯಲ್ಲಿ "ಕಣ್ಮಣಿ" ಎಂಬ ವಿಶೇಷ ಅಂಕಣವನ್ನು ತೆರೆಯಲು ನಿರ್ಧರಿಸಿದ್ದೇವೆ. ಈ ಅಂಕಣದಲ್ಲಿ ನಿಮ್ಮ ಮಕ್ಕಳ ಹುಟ್ಟು ಹಬ್ಬದ ಶುಭಾಶಯಗಳನ್ನು ಜನ್ಮ ದಿನಾಂಕಕ್ಕನುಗುಣವಾಗಿ ಸಂಗಾತಿ ಓದುಗರಿಗೆ ತಿಳಿಸುವುದಾಗಿದೆ. ಹಾಗೆಯೇ ಮದುವೆ ವಾರ್ಷಿಕೋತ್ಸವವನ್ನು ಸಹ ತಿಳಿಸಿದಲ್ಲಿ ಸಂದರ್ಭಾನುಸಾರವಾಗಿ ಪ್ರಕಟಿಸಲಾಗುವುದು. ಅಭಿಮಾನಿಗಳು ತಮ್ಮ ಮಕ್ಕಳ ಹುಟ್ಟು ಹಬ್ಬದ/ಮದುವೆಯ/ಮದುವೆಯ ವಾರ್ಷಿಕೋತ್ಸವವನ್ನು ಸವಿವರವಾಗಿ ಬರೆದು ಕಪ್ಪು ಬಿಳುಪು ಭಾವಚಿತ್ರದೊಂದಿಗೆ ಕಳುಹಿಸಿದಲ್ಲಿ ನಾವು ಅದನ್ನು ಪ್ರಚುರಪಡಿಸುತ್ತೇವೆ. ಇದಕ್ಕೆ ಯಾವ ಸಂಭಾವನೆಯನ್ನು ಪಡೆಯುವುದಿಲ್ಲ. ಆದರೆ ಭಾವಚಿತ್ರದ ಖರ್ಚನ್ನು ಮಾತ್ರ ನೀವೇ ಭರಿಸಬೇಕಾಗುತ್ತದೆ.

ಮಕ್ಕಳ ಪಾಸ್‌ಪೋರ್ಟ್ ಭಾವಚಿತ್ರಕ್ಕೆ ರೂ. 75-00

ಮದುವೆ ವಾರ್ಷಿಕೋತ್ಸವದ ಭಾವಚಿತ್ರಕ್ಕೆ ರೂ. 100-00

ಓದುಗರು ಈ ಒಂದು ಸುವರ್ಣಾವಕಾಶವನ್ನು ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ.

—ಸಂಪಾದಕಿ

ಕಪ್ಪೆ

ಏನೂ ಮಾಡಿದರೂ ನಿದ್ದೆಯೂ ಬರುತ್ತಿಲ್ಲ. ಹೊದಿಕೆ ತೆಗೆದರೆ ಸೊಳ್ಳೆಕಾಟ, ಹೊದಿಕೆ ಎಳೆಕೊಂಡರೆ ಸೆಕೆ, ಚಾಪೆಬೇರೆ ಒತ್ತುತ್ತಿದೆ. ಭೂಮಿ 24 ಗಂಟೆಗೊಮ್ಮೆ ತನ್ನ ಅಕ್ಷದ ಒಂದು ಸುತ್ತು ಸುತ್ತಿದರೆ ನಾನು ಮಲಗಿದ್ದಲ್ಲೇ ಒಂದು ಸುತ್ತು ಸುತ್ತಲು ತೆಗೆದುಕೊಳ್ಳುತ್ತಿದ್ದ ಸಮಯ ಕೇವಲ 12 ನಿಮಿಷ. ಇನ್ನೇನು ಕೇವಲ 2 ತಾಸಿನಲ್ಲಿ ಬೆಳಕು ಹರಿಯುತ್ತದೆ. ರಾತ್ರಿ ಪೂರ್ತಿ ಇನ್ನಾವುದರ ಸುತ್ತೂ ಸುತ್ತ

ಕುಂಭಗೌಡನ ರಂಜಿತ್,
ಮಕ್ಕಂದೂರು

ಲಾಗದೆ ಕೇವಲ ನನ್ನ ಅಕ್ಷದ ಸುತ್ತೂ ಸುತ್ತುತ್ತಿದ್ದ ನನಗೆ ಇನ್ನೆರಡು ತಾಸು ಕಳೆಯುವುದು ಏನೂ ಮಹಾ ಎಂದು ಚಾಪೆಯ ಪೂರ್ಣಪ್ರಮಾಣದ ಉಪಯೋಗ ಪಡೆದುಕೊಳ್ಳಬೇಕೆಂದು ಕೈಕಾಲುಗಳನ್ನು ಹರಡಿ ಅಂಗಾತ ಮಲಗಿದ್ದೆ. ಏಕೋ ನಿದ್ರಾದೇವಿ ನನ್ನ ದೀರ್ಘ ಸಾಧನೆಗೆ ಸ್ವಲ್ಪ ಕರಗಿ ನನಗೆ ಸ್ವಲ್ಪ ಮಂಪರು ಹತ್ತತೊಡಗಿತು.

ಎದೆಯ ಮೇಲೆ ಏನೋ ಮಂಜುಗಡ್ಡೆಯ ತುಂಡೊಂದನ್ನು ಇಟ್ಟ ಅನುಭವ. ಮಂಜುಗಡ್ಡೆ ಆಗಿದ್ದರೆ ವಾತಾವರಣದ ಶಾಖಕ್ಕೋ ಇಲ್ಲಾ ಶರೀರದ ಶಾಖಕ್ಕೋ ಕರಗಿ ನೀರಾಗಿ ಒಂದೊಂದೇ ಹನಿ ಕೆಳಗೆ ಜಾರಬೇಕಿತ್ತು. ಆದರೆ ಹಾಗಾಗುತ್ತಿಲ್ಲ ಒಮ್ಮೆ ಎದೆಗೆ ಒತ್ತಿ ಹಿಡಿದಂತೆ, ಮತ್ತೆ ಸ್ವಲ್ಪ ಹೊತ್ತು ದೂರ ಸರಿಸಿದಂತೆ ಅನುಭವ. ಈಗ ಪೂರ್ಣ ಎಚ್ಚರಾಗಿತ್ತು ಕಣ್ಣು ತೆರೆದರೆ ನನ್ನ ಮುಂದಿರುವ ಆಕೃತಿಯನ್ನು ಕಂಡು ಭಯಭೀತನಾಗಿ ಮುಂದೇನು ಮಾಡಬೇಕೆಂದು ತೋಚದೆ ಹೋಗಬಹುದು. ಆದುದರಿಂದ ಕಣ್ಣು ತೆರೆಯದೆನೆ ಈ ಉಪದ್ರವು ಏನಿರಬಹುದು, ಅದನ್ನು ಹೇಗೆ ಎದುರಿಸಬೇಕೆಂದು ಎರಡೂ ಕೈಗಳ ಮುಷ್ಟಿಯನ್ನು ಬಿಗಿಮಾಡಿಕೊಂಡು, ಎರಡೂ ಕಾಲುಗಳಿಗೂ ಆದೇಶ ಸಿಕ್ಕೊಡನೆ ಮಿಂಚಿನ ವೇಗದಲ್ಲಿ ಜಾಡಿಸಿ ಒದೆಯಲು ತಯಾರಾಗುವಂತೆ ಮಾನಸಿಕ ತಯಾರಿ ಮಾಡಿಕೊಂಡೆ.

ಟ್ರಕ್...ಎಂಬ ಶಬ್ದ ಬಂತು ಓ ಮಂಡೂಕ ಮುಷ್ಟಿ ಸಡಿಲಿಸಿ ಕಣ್ಣು ತೆರೆದು ನೋಡಿದೆ. ಭಾರಿಗಾತ್ರದ ಕಪ್ಪೆಯೊಂದು ನನ್ನ ಎದೆಯ ಮೇಲೆ ಕುಳಿತು ನನ್ನ ಮುಖವನ್ನು ತದೇಕ ದೃಷ್ಟಿಯಿಂದ ನೋಡುತ್ತಿತ್ತು. ಜೋರಾಗಿ ಕೈಯಿಂದ ತಳ್ಳಿದರೆ ಪಕ್ಕದ ಚಾಪೆಯಲ್ಲಿರುವವನ ಮೇಲೆ ಬಿದ್ದು ಕೊಂಡರೆ, ಹಾಗೆ ಕೈಯಲ್ಲಿ ಹಿಡಿದು ಕಿಟಕಿಯಿಂದಾಚೆ ಎಸೆಯಬೇಕೆಂದು ಕೈ ಮುಂದೆ ತೆಗೆದುಕೊಂಡು ಹೋದೆ.

ಹೇ...ನಿಲ್ಲು, ನಿನ್ನ ಸಂದರ್ಶನ ಮಾಡಬೇಕು ಎಂದಿತು ಕಪ್ಪೆ. ನೀನೇನು ನನ್ನ ಸಂದರ್ಶನ ಮಾಡುವುದಿದೆ ಅಂದದ್ದಕ್ಕೆ ನೀನು 10 [ಹತ್ತು] ದಿನಗಳ ತರಬೇತಿಗಾಗಿ ಇಲ್ಲಿಗೆ ಬಂದಿರಬಹುದಷ್ಟೆ. ಆದರೆ ನಾನು ಈ ವಸತಿ ಗೃಹದಲ್ಲಿ ವಾಸವಿದ್ದುಕೊಂಡು ನಿನ್ನಂತಹ ಸಾವಿರಾರು ಅಭ್ಯರ್ಥಿಗಳನ್ನು ಕಂಡಿದ್ದೇನೆ. ಅ ರೆಲ್ಲಾ ಇಲ್ಲಿ ಪಡೆದ ತರಬೇತಿಯ ಲಾಭ ಪಡೆದುಕೊಂಡು ತಮ್ಮ ವೃತ್ತಿಯಲ್ಲಿ ಯಶಸ್ವಿ ಆಗದಿದ್ದರೆ ಇಂದು ಬಹುಶಃ ನಮ್ಮ ರಾಜ್ಯದ ಚರಿತ್ರೆಯೇ ಬದಲಾಗುತ್ತಿತ್ತೇನೋ ? ಅದೇನೋ ನನಗೆ ಗೊತ್ತಿಲ್ಲ, ನನ್ನನ್ನು ಏನು ಕೇಳಬೇಕೆಂದಿರುವೆ. ಬೇಗ ಕೆಲಸ ಮುಗಿಸು ಎಂದೆ.

ಮಂಡೂಕ ನನಗೆ ಎಸೆದ ಮೊದಲ ಪ್ರಶ್ನೆ ಎಂದರೆ, ನೀನು ಎಲ್ಲಿಗೋ ಹೊರಟವ ದಾರಿ ತಪ್ಪಿ ಅಥವಾ ದಾರಿಮಧ್ಯೆ ಸ್ವಲ್ಪ ವಿಶ್ರಾಂತಿಗೆಂತ ಇಲ್ಲಿಗೆ ಬಂದದ್ದೋ? ಅಥವಾ ಇಲ್ಲಿಗೇ ಅಂತ ಹೊರಟು ನೇರವಾಗಿ ಬಂದದ್ದೋ ?

ಮಂಡೂಕ ನನ್ನ ಸಂದರ್ಶನ ಮಾಡುವ ಮೊದಲು ನಾನು ಅನೇಕ ಸಂದರ್ಶನಗಳನ್ನು ಎದುರಿಸಿ ಅನುಭವ ಇದ್ದುದರಿಂದ ಸಂದರ್ಶಕರ ಪ್ರಶ್ನೆಗೆ ಹೇಗೆ ಚುಟುಕಾಗಿ, ಜಾಣ್ಮೆ, ಜಾಗರೂಕತೆಯಿಂದ ಉತ್ತರಿಸಬೇಕೆಂದು ತಿಳಿದುಕೊಂಡಿದ್ದೆ. ನೇರವಾಗಿ ಇಲ್ಲಿಗೆಂದೇ ಬಂದದ್ದು ಎಂದೆ. ಮರು ಪ್ರಶ್ನೆ ನಿನಗೆ ರೇಷ್ಮೆ ಕೃಷಿಯ ಬಗ್ಗೆ ಆಸಕ್ತಿ ಬಂದದ್ದು ಹೇಗೆ ?

ನಾನು ಚಿಕ್ಕವನಿದ್ದಾಗ ಮೈಸೂರಿನ ಕಡೆ ನನ್ನ ಸಂಬಂಧಿಕರೊಬ್ಬರ ಮನೆಗೆ ಆಗಾಗ್ಗೆ ಹೋಗುತ್ತಿದ್ದೆ ಅಲ್ಲಿ ಅವರು ರೇಷ್ಮೆ ಕೃಷಿ ಮಾಡುತ್ತಿದ್ದರು ಆಗಿಂದಲೆ ನನಗೂ ರೇಷ್ಮೆ ಕೃಷಿ ಮಾಡಬೇಕೆನಿಸಿತ್ತಿತ್ತು. ಈಗ ನಮ್ಮ ಜಿಲ್ಲೆಯ ರೇಷ್ಮೆ ಕೃಷಿಬಗ್ಗೆ ಸಾಕಷ್ಟು ಪ್ರಚಾರ ಕೊಡುತ್ತಿರುವುದರಿಂದ ನಾನು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳನ್ನು ಬೇಟಿಯಾಗಿ ಅವರ ಸಲಹೆಯಂತೆ ಈ ತರಬೇತಿಗೆ ಬಂದಿದ್ದೇನೆ ಎಂದು ಉತ್ತರಿಸಿ ನನ್ನ ಉತ್ತರದಿಂದ ಮಂಡೂಕದ ಮೇಲಾದ ಪರಿಣಾಮವನ್ನು ಅದರ ಮುಖಭಾವದಿಂದ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೆ.

ಮುಂದಿನ ಪ್ರಶ್ನೆ ನೀನು ಉದ್ಯೋಗಕ್ಕೇಕೆ ಹೋಗಲಿಲ್ಲ?

ನನಗೆ ಉದ್ಯೋಗ ಕೊಡಿಸುವವರು ಅನೇಕರಿದ್ದರು. ಆದರೆ ಉದ್ಯೋಗ ಕೊಡುವವರು ಒಬ್ಬರೂ ಸಿಗಲಿಲ್ಲ. ಆದರೆ ಈ ಉತ್ತರ ಇಲ್ಲಿ ಸಮಂಜಸ ಆಗಲಾರದು. ಆದುದರಿಂದ ಸಂದರ್ಶಕ ಮಂಡೂಕವನ್ನು ಮೆಚ್ಚಿಸುವಂತ ಉತ್ತರಕ್ಕಾಗಿ ತಡಕಾಡುತ್ತಿದ್ದಾಗ ಸಿದ್ದವನ ಸ್ವ-ಉದ್ಯೋಗ ತರಬೇತಿ ಕೇಂದ್ರದ ಕಛೇರಿಯ ಬಾಗಿಲ ಮೇಲಿನ ಗೋಡೆಯ ಮೇಲೆ ದಪ್ಪಕ್ಷರದಲ್ಲಿ ಬರೆದು ಕೆಳಗಡೆ—ವೀರೇಂದ್ರ ಹೆಗ್ಗಡೆ ಎಂದು ಬರೆದಿದ್ದ ಆ ವಾಕ್ಯಗಳು ನೆನಪಾದವು. ಅದೇ ವಾಕ್ಯಗಳನ್ನು ನಾನು ಉತ್ತರ ರೂಪದಲ್ಲಿ ಉಚ್ಚರಿಸಿದೆ "ಪದವಿ ಪಡೆದುಕೊಂಡು ಇನ್ನೊಬ್ಬರ ಅಧೀನದಲ್ಲಿ ಅವರ ಲೆಕ್ಕ ಬರೆಯುವುದಕ್ಕಿಂತ ಸ್ವ ಉದ್ಯೋಗ

ಗೊಂಡು ತನ್ನ ಲೆಕ್ಕವನ್ನು ತಾನೇ ಬರೆಯುವುದು ಉತ್ತಮ."

ಈ ವಿಚಾರ ಮೊದಲೇ ಇತ್ತೋ? ಅಥವಾ ಇಲ್ಲಿಗೆ ಬಂದ ನಂತರ ಅಲ್ಲಿ ಗೋಡೆ ಮೇಲೆ ಬರೆದಿದ್ದನ್ನು ಕಂಠಪಾಠ ಮಾಡಿದ್ದೋ?... ಈ ಬಾರಿ ಅದು ನನ್ನ ಉತ್ತರಕ್ಕೂ ಕಾಯದೆ ಒಳ್ಳೆಯದಾಗಲಿ ಎಂದು ಹರಸಿ ಟ್ರಿಕ್.... ಎಂದು ಎದೆಯ ಮೇಲಿಂದ ಹಾರಿ ಕಣ್ಮರೆಯಾಯಿತು.

ಸ್ವಲ್ಪ ಹೊತ್ತು ಹಾಗೆ ಕಣ್ಣು ಮುಚ್ಚಿ ಮಲಗಿದ್ದೆ. ನನ್ನ ಸಹ ತರಬೇತಿ ಮಿತ್ರರು ಎದ್ದು ಶೌಚಾಲಯದ ಕಡೆ ಓಡಾಡುವ ಹೆಜ್ಜೆ ಸಪ್ಪಳ, ಶೌಚಾಲಯದಲ್ಲಿನ ನಲ್ಲಿಗಳ ಸಪ್ಪಳ ಕೇಳಿ ನಾನು ಎದ್ದು ಶೌಚಾಲಯದ ಕಡೆ ನಡೆದೆ. ಅಲ್ಲೇ ಒಂದು ಕಪ್ಪೆ ಕೈಕಾಲು ಚಾಚಿ ರಕ್ತಕಾರಿಕೊಂಡು ಬಿದ್ದಿತ್ತು. ಹೌದು ಅದೇ ನನ್ನನ್ನು ಸಂದರ್ಶಿಸಿದ ಮಂಡೂಕ. ಇದಕ್ಕೆ ಇಂತಹ ಅಪಮೃತ್ಯು ಬರಬಾರದಿತ್ತು ಎಂದು ಬೇಸರಗೊಂಡು ಅದನ್ನು ನೋಡುತ್ತ ನಿಂತಿದ್ದೆ. "ನೀನು ನಾಯಕನಲ್ಲವೇ, ನೀನೆ ಅದನ್ನು ಆಚೆಗೆ ಎಸೆಯಬೇಕು" ಎಂದು ಹಿಂದಿನಿಂದ ಒಬ್ಬ ಮಿತ್ರ ಉಸುರಿದ. ನನಗೆ ಈ 10 [ಹತ್ತು] ದಿನದ ತರಬೇತಿಯ ತಂಡದ ನಾಯಕ ಪಟ್ಟ ಸಿಗದಿದ್ದರೂ ನಾನು ಆ ಕೆಲಸ ಮಾಡುವವನಿದ್ದೆ. ಸರಿ ತುದಿ ಬೆರಳುಗಳಿಂದ ಕಪ್ಪೆಯ ಕಾಲುಗಳನ್ನು ಹಿಡಿದೆತ್ತಿ ಹಜಾರದಿಂದ ಹೊರ ಬಾಗಿಲ ಬಳಿ ಬಂದೆ. ಎದುರಿಗೆ ತರಬೇತಿ ಕೇಂದ್ರದ ಮೇಲ್ವಿಚಾರಕರು ಬರುತ್ತಿದ್ದರು. "ಏಕೆ ಕೊಂದೆ" ಎಂದರು. ಸ್ವಾಮಿ ಇದು ಕೊಲೆಯಲ್ಲ ಎಂದೆ. ಹಾಗಾದರೆ ಆತ್ಮಹತ್ಯೆಯೋ? ಎಂದರು. ಇಲ್ಲ "Hit and run" case ಎಂದೆ. ಅದಕ್ಕೆ ನೀನೇ ಆಗಬೇಕಿತ್ತೆ ಎಂದರು. ನಾನಾದುದರಿಂದ ನಾನೇ ಆಗಬೇಕಿತ್ತೇ? ಅವರಾಗಿದ್ದರೆ ಅವರೇ ಆಗಬೇಕಿತ್ತೇ? ಯಾರಾದರೊಬ್ಬರು ಆಗಲೇ ಬೇಕಲ್ಲಾ ಎಂದೆ.

ಊರಿಗೆ ಬಂದು ರೇಷ್ಮೆ ಕೃಷಿ ಕೈಗೊಂಡು ಕೈ ಸುಟ್ಟುಕೊಂಡರೂ ಅಂದು ನನ್ನ ಸಂದರ್ಶನ ಮಾಡಿದ ಮಂಡೂಕವನ್ನು ಮಾತ್ರ ಮರೆಯಲು ನನ್ನಿಂದ ಸಾಧ್ಯವಿಲ್ಲ. ●

ಸನಾತನ ಧರ್ಮ

ಇಂಗ್ಲೀಷ್ ಭಾಷೆಯಲ್ಲಿ 'ಧರ್ಮ' ಎಂಬ ಪದಕ್ಕೆ ಸಮ ನಾರ್ಥಕ ಪದ 'ರಿಲಿಜನ್' (religion) ಎಂಬುದು. ಇದನ್ನು 'ರಿಲಿಎರ್' ಎಂಬ ಮೂಲಧಾತುವಿನಿಂದ ಪಡೆದುಕೊಂಡು ಅದು ಕಟ್ಟು ಇಲ್ಲವೆ ಕಲೆ ಹಾಕು ಎಂದಾಗುತ್ತದೆ.

'ರಿಲಿಜನ್' ಪದಕ್ಕೆ ಅತಿ ಹತ್ತಿರವಾದ ಅರ್ಥಕೊಡುವ ಸಂಸ್ಕೃತದಲ್ಲಿನ ಪದ 'ಧರ್ಮ' ಎಂಬುದು. ಇದು 'ಧೃ' 'ಧರ' ಎಂಬ ಧಾತುವಿನಿಂದ ಬಂದಿದ್ದು 'ಹಿಡಿ'–'ಎತ್ತಿ ಹಿಡಿ' ಎಂಬ ಅರ್ಥವನ್ನು ಕೊಡುತ್ತದೆ. ಆದರಿಂದ ಧರ್ಮವು ಜನರನ್ನು 'ಎತ್ತಿ ಹಿಡಿಯುವ' ಮತ್ತು 'ಒಂದುಗೂಡಿಸು'ವ ವ್ಯವಸ್ಥೆಯಾಗಿ ಬೆಳೆದಿದೆ. ಧರ್ಮಗಳು ಬೇರೆ ಬೇರೆ ಇದ್ದರೂ ಅವುಗಳ ಅಂತಿಮ ಗುರಿ ಒಂದೇ.

ಆಧಾರ : ತೆಕ್ಕಡ ಬಿ. ಕುಮಾರ್, ಮುತ್ತಾರ್ಮುಡಿ

'ಹಿಂದೂ' ಶಬ್ದವು ಪುರಾತನ ಕಾಲದಲ್ಲಿ ಗ್ರೀಕರಿಂದ 'ಇಂಡಸ್' (ಸಿಂಧೂ ನದಿಯ ಕುಲಗೆಟ್ಟ ಉಚ್ಚಾರ) ನದಿಯ ಆಚೆಗೆ ಇರುವ ಜನರನ್ನು ಗುರ್ತಿಸಲು ಮೊದಲು ಉಪಯೋಗಿಸಲ್ಪಟ್ಟಿತು. ಪರ್ಷಿಯದ ಭಾಷೆಯಲ್ಲಿ 'ಹಿಂದೂ' ಶಬ್ದದ ಅರ್ಥ 'ಕಪ್ಪು' ಆದರಿಂದ ಭಾರತದ ನಿವಾಸಿಗಳು ಕಪ್ಪಾಗಿದ್ದುದರಿಂದ ಹಿಂದೂಗಳೆಂದು ಇಲ್ಲಿಯ ಧರ್ಮವನ್ನು ಹಿಂದೂ ಧರ್ಮವೆಂದು ಒಂದು ತಪ್ಪು ಹೆಸರಿನ ಪ್ರಯೋಗ. ಸನಾತನ ಧರ್ಮ ಎಂದರೆ ಶಾಶ್ವತ ಧರ್ಮ. ವಿವೇಕಾನಂದರು ಈ ಧರ್ಮವನ್ನು ವೇದಾಂತ ಇಲ್ಲವೆ ವೈದಿಕ ಧರ್ಮ ಎಂದು ಕರೆದರು.

ಋಷಿಗಳು ಜ್ಞಾನವನ್ನು ಹಂತ ಹಂತವಾಗಿ ಕಂಡು ಹಿಡಿದರು. ಹೀಗೆ ಶೇಖರಿಸಿದ ಜ್ಞಾನವೇ ವೇದಗಳು. ಇವುಗಳ ಸಾರ ಉಪನಿಷತ್ತುಗಳಲಿದ್ದು ಪುರಾಣಗಳಲ್ಲಿ ಮಹಾಕಾವ್ಯಗಳಲ್ಲಿ ವಿಶದೀಕರಿಸಿ ಉದಾಹರಿಸಲ್ಪಟ್ಟಿವೆ. ಸನಾತನ ಧರ್ಮದ ಆಧಾರ ಮಹಾಕಾವ್ಯವಾದ ಮಹಾಭಾರತದ ಭಾಗವಾಗಿದೆ. ವೇದಗಳು ಉಪನಿಷತ್ತುಗಳು ಮತ್ತು ಭಗವದ್ಗೀತೆ ಸನಾತನ ಧರ್ಮದ ಆಧಾರವಾಗಿದೆ. ಹಿಂದೂ ಧರ್ಮದ ಪ್ರಕಾರ ಸ್ವಯಂ ಸ್ಥಿತಿಯುಳ್ಳ, ಆದಿ–ಅಂತ್ಯವಿಲ್ಲದ ಅಂತಿಮ ಸತ್ಯವು ಬ್ರಹ್ಮನ್ ಎಂದು ಕರೆಯಲ್ಪಟ್ಟಿದೆ. ಸೃಷ್ಟಿ, ಲಯ, ಕರ್ಮ, ಶಕ್ತಿಗಳೆಲ್ಲವೂ ಒಂದರಲ್ಲಿ ಸಮಾವೇಶಗೊಂಡು ಮತ್ತು ನಿರಂತರವಾಗಿ ಕ್ರಿಯಾತ್ಮಕವಾಗಿರುವ ತತ್ [ಅಂತಿಮ ಸತ್ಯ]ನಿಂದ ಪ್ರತಿಯೊಂದೂ ಉದ್ಭವಿಸಿದೆ.

ಪ್ರಣವ ಅಥವಾ ಓಂ ಎಂಬುದು 'ಬ್ರಹ್ಮನ್'ದ ಸಂಕೇತ. ಓಂ ಎಂಬುದು ಹಿಂದೂ ಧರ್ಮದ ಸಾರ್ವತ್ರಿಕವಾಗಿ ಸ್ವೀಕೃತವಾಗಿರುವ ಸಂಕೇತ.

(12ನೇ ಪುಟ. ನೋಡಿ)

ಕೊಡಗು ಗೌಡ (ಅರೆಭಾಷಿಕ) ಸಂಸ್ಕೃತಿ ಅಳಿಯುವ ಅಂಚಿನಲ್ಲಿದೆಯೋ ?

ಪ್ರತಿಯೊಂದು ಜನಾಂಗಕ್ಕೆ ಅದರದ್ದೇ ಆದ ಪ್ರತ್ಯೇಕ ಸಂಸ್ಕೃತಿ ಇದ್ದೇ ಇದೆ. ವಿದ್ಯೆ ಮತ್ತು ಆರ್ಥಿಕ ಮಟ್ಟಗಳಲ್ಲಿ ಪ್ರಗತಿ ಕಂಡಂತೆಲ್ಲಾ ನಾಗರೀಕತೆ ಹೆಚ್ಚುತ್ತದೆ. ನಾಗರೀಕತೆ ಮುಂದುವರಿದಂತೆ ಜನಾಂಗದ ಸಂಸ್ಕೃತಿಯು ಕೂಡಾ ತತ್ಸಮಾನ ಸಂಪದ್ಭರಿತವಾಗಿ ಬೆಳೆಯಬೇಕು. ಇದರ ವಿಚಾರವು ಪ್ರತಿಯೊಬ್ಬ ನಾಗರೀಕನ ಚಿಂತನೆಯಾಗಬೇಕು. ನಮ್ಮ ಸಂಸ್ಕೃತಿ ಹೇಗೆ ಬೆಳೆಯುತ್ತದೆ ಮತ್ತು ಎತ್ತಕಡೆ ಸಾಗುತ್ತಿದೆ ಎಂಬ ಇತ್ತೀಚಿನ ವಿಚಾರಗಳೂ ಸಂಸ್ಕೃತಿ ಪ್ರೇಮಿ ಹಿರಿಯ ವ್ಯಕ್ತಿಗಳನ್ನು ಚಿಂತೆಗೊಳಪಡಿಸದೆ ಇಲ್ಲ. ಸಂಸ್ಕೃತಿಯು

ಬೈತಡ್ಕ ಬೆಳ್ಯಪ್ಪ, ಮಡಿಕೇರಿ

ಆಗಿಂದ್ದಾಗ್ಗೆ ಜೀವಂತಗೊಂಡು ಪ್ರಗತಿಯ ಪಥದಲ್ಲಿ ಸಾಗುತ್ತಲೇ ಇರಬೇಕು. ಅದಕ್ಕೆ ದಿಕ್ಕು ಬದಲಾಯಿಸಿ ಇನ್ಯಾವುದೋ ಸಂಸ್ಕೃತಿಯತ್ತ ವಾಲಬಾರದು. ಈ ರೀತಿ ಆದರೆ ನಮ್ಮನ್ನು ನಾವೇ ಗುರುತಿಸಿಕೊಳ್ಳುವುದು ಕಷ್ಟಸಾಧ್ಯವಾಗುವುದರಲ್ಲಿ ಸಂಶಯವಿಲ್ಲ. ನಮ್ಮ [ಕೊ. ಅರೆಭಾಷಿಕ] ಸಂಸ್ಕೃತಿಯು ಜೀವಂತಗೊಂಡು, ಸಂಪದ್ಭರಿತ ಸಂಸ್ಕೃತಿಯಾಗಿ ಬೆಳೆದು ನಾವು ಇತರ ಜನಾಂಗದವರ ಹಾಗೆ ಅದರಲ್ಲಿ ಮೆರೆದು ಬಾಳುವಂತಾಗಬೇಕಾಗಿದೆ. ಇಲ್ಲಿ ಮೊದಲಿಗೆ ಉದ್ಭವವಾಗುವ ಪ್ರಶ್ನೆ—ನಮಗೆ ಸಂಸ್ಕೃತಿ ಬೇಕೋ ಅಥವಾ ಬೇಡವೊ ಎಂದು. ಇರಬೇಕಾದರೆ ಅದು ಯಾವ ಸಂಸ್ಕೃತಿ ? ಅದಕ್ಕಾಗಿಯೇ ದಿಟ್ಟ ಹೆಜ್ಜೆಯಿಟ್ಟು ಸಂಸ್ಕೃತಿ ಅಕಾಡಮಿ ರಚನೆಯಾದದ್ದು ನಮ್ಮ ಪುಣ್ಯ. ಜಿಲ್ಲೆಯ ಎರಡು ಸ್ಥಳಗಳಲ್ಲಿ ನಮ್ಮ ಸಂಸ್ಕೃತಿಯ ಅಂಗವಾಗಿ ಅಕಾಡಮಿಯು ಹಮ್ಮಿಕೊಂಡಿದ್ದ ಕಾರ್ಯಕ್ರಮಗಳ ಪ್ರದರ್ಶನಗಳು ನಮ್ಮೆಲ್ಲರನ್ನು ಚೇತರಿಸಿಕೊಟ್ಟಿವೆ. ಇಷ್ಟಕ್ಕೇನೇ ನಮ್ಮ ಆಚಾರ ವಿಚಾರ ಮತ್ತು ವಿವಿಧ ಸಂಪ್ರದಾಯಗಳು ಜೀವಂತವಾಗಿವೆ ಎಂದು ಹೇಳುವುದು ಕಷ್ಟ.

ಮೇಲೆ ಹೇಳಿದಂತೆ ನಾಗರೀಕತೆಯು ವಿದ್ಯೆ ಮತ್ತು ಆರ್ಥಿಕಮಟ್ಟಗಳನ್ನು ಅವಲಂಬಿಸಿಕೊಂಡು ಬೆಳೆಯುತ್ತದೆ. ಆರ್ಥಿಕ ಮಟ್ಟ ಉತ್ತಮಗೊಂಡಂತೆಲ್ಲಾ ಸಂಸ್ಕೃತಿಯನ್ನು ಕಡೆಗಣಿಸುವುದೆಂದರೆ ಅದು ಜನ್ಮವಿತ್ತ ತಂದೆ ತಾಯಿಯವರನ್ನು ಕಡೆಗಣಿಸಿದಂತೆಯೇ ಸರಿ. ನಾಗರೀಕತೆ ಹೊರಪ್ರಪಂಚದ ವಿಜ್ಞಾನದತ್ತ ಸಾಗಿದರೆ ಸಂಸ್ಕೃತಿಯು ತನ್ನ ಹುಟ್ಟು ಶೋಧನೆಗಳತ್ತ ತಾರತಮ್ಯಗಳಿಗೆ ಆಸ್ಪದ ಕೊಡದೆ ಒಂದೇ ಆಯಕಟ್ಟಿನಲ್ಲಿ ಬೆಳೆಯಬೇಕು. ಸಂಸ್ಕೃತಿಯು ನಾವು ಆಡುವ ಭಾಷೆ, ಉಡುಪು, ಸೇವಿಸುವ ಆಹಾರಗಳನ್ನೊಳಗೊಂಡು ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿರುವ ಅಂಧಚಾರವಲ್ಲದ ಆಚಾರ ವಿಚಾರಗಳು, ಶಿಷ್ಟಾಚಾರದ ಈ ಸಂಪ್ರದಾಯವು ಜನಾಂಗಕ್ಕೆ ನೆಮ್ಮದಿ, ಶಾಂತಿ, ಪ್ರೀತಿ ಮತ್ತು ವಿಶ್ವಾಸಗಳನ್ನು ಬೆಳೆಸುವ ಸಾಧನೆ. ಉಣ್ಣುವ ಊಟ ತಿನ್ನುವ ತಿಂಡಿ ಅಥವಾ ಆಡುವ ಭಾಷೆಯಿಂದ ಒಬ್ಬ ವ್ಯಕ್ತಿಯನ್ನು ಆತನ ಜನಾಂಗ ಯಾವುದು ಎಂಬುವುದನ್ನು ಹೇಳಲು ಸಾಧ್ಯವಿಲ್ಲ. ಆದರೆ ಶುಭಕಾರ್ಯ ಹಬ್ಬ ಹರಿದಿನಗಳಲ್ಲಿ ಆತನು ಅಥವಾ ಆಕೆಯು ತೊಟ್ಟುಕೊಳ್ಳುವ ಉಡುಪಿನಿಂದ ಗುರುತಿಸಬಹುದು. ಆರ್ಥಿಕ ಮಟ್ಟ ಎಷ್ಟೇ ಉತ್ತಮವಿರಲಿ ಅಥವಾ ಸಮಾಜದಲ್ಲಿ ನಾಗರೀಕನಾಗಿರಲಿ ಸಂಸ್ಕೃತಿ ಮತ್ತು ಅದರ ಹಿರಿಮೆಯ ಅರ್ಥವೇ ಬೇರೆ. ಮರಳಿ ಮಣ್ಣಿಗೆ ಎಂಬ ಮಾತಿನಂತೆ, ಆದಿಯಿಂದ ಬಂದದ್ದು ಅಂತ್ಯದವರೆಗೆ ಬರುತ್ತಲೇ ಇರುತ್ತದೆ. ಮದುವೆಯ 'ಧಾರೆ ಎರೆಯುವ ಕೇಂದ್ರ ಬಿಂದುವಿನ ಶುಭಮುಹೂರ್ತದಲ್ಲಿ ವಧೂವರರು ಮಾಮೂಲಿನ ಉಡುಪಿನಲ್ಲಿದ್ದರೆ ಸಂಸ್ಕೃತಿಯ ಉಲ್ಲಂಘನೆ ಮಾತ್ರವಲ್ಲ ಇತರರಿಗೆ ಅವರು ಇಂತಹದೇ ಜನಾಂಗದವರೆಂದು ಗುರುತಿಸಲು ಕಷ್ಟಸಾಧ್ಯದ ಕೆಲಸ. ಉಡುಪುಗಳ ಪೈಕಿ ತಲೆ ಉಡುಪು ಅತೀ ಮುಖ್ಯ. ನಾವ್ಯಾರು ನಿತ್ಯ ರುಮಾಲು, ಮುಸುಕು ಅಥವಾ ವಸ್ತ್ರಗಳನ್ನು ಧರಿಸುವುದಿಲ್ಲ. ಹಾಗೆನೇ ಕೋಟು, ಪಂಚೆ, ರುಮಾಲು ಶಾಲುಗಳನ್ನು ಇತರ ಎಲ್ಲಾ ಸಂದರ್ಭಗಳಲ್ಲಿ ಧರಿಸುತ್ತೇವೆಯೇ? ಯಾವ ಸಂದರ್ಭದಲ್ಲಿ ಯಾವ ಉಡುಪನ್ನು ಧರಿಸಬೇಕೆಂದು ಹೇಳುವುದೇ ಸಂಸ್ಕೃತಿ. ಅದನ್ನು ಉಲ್ಲಂಘಿಸಿದರೆ ಅಸಂಸ್ಕೃತಿಯಾಗುವುದಿಲ್ಲವೆ? ಮೂಲಭೂತ ಹಕ್ಕು ಇದೆ ಎಂದು ತನಗೆ ಇಷ್ಟಬಂದ ವೇಷ ಭೂಷಣಗಳಲ್ಲಿ ಮೆರೆಯಬಹುದೆ ? [ಮದುವೆ ಶುಭಕಾರ್ಯಗಳಲ್ಲಿ] ಚಡ್ಡಿ ಅಥವಾ ನೈಟಿಧಾರಿಯಾಗಿ ಶೋಭಿಸಿಕೊಂಡರೆ ?! ಹುಟ್ಟು ಸಾವುಗಳು ಮನುಷ್ಯನಿಗೆ ಬರುವುದು ಒಮ್ಮೆ ಮಾತ್ರ ಇತ್ತೀಚಿನ ದಿನಗಳಲ್ಲಿ ನಾಗರೀಕತೆ ಎಂದು ನಾವು ಏನನ್ನು ಕರೆಯುತ್ತೇವೆಯೋ ಅದು ಹೆಚ್ಚಾದಂತೆಲ್ಲಾ ನಮ್ಮ ಜನಾಂಗದಲ್ಲಿ ವಿವಾಹ ವಿಚ್ಛೇದನೆಯು ಪಿಡುಗೂ ಕೂಡ ಜಾಸ್ತಿಯಾಗಿದೆ. ಆ ವಿಚಾರ ಬೇರೆ.

ಆಯಾ ಸಂಸ್ಕೃತಿಗೆ ಅದರದ್ದೇ ಆದ ಮೂಲಭಾಷೆ ಇದೆ. ಅದೇ ಆದಿ ಮಾತೃಭಾಷೆ-ಮನೆಯೊಳಗೆ ಆಡುವ ಭಾಷೆ. ಅದರಂತೆ ಅರೆಭಾಷಿಕ ನವ ಯುವ ಪೀಳಿಗೆಯವರಿಗೆ ಈಗಿನ ವೈಜ್ಞಾನಿಕ ಜೀವನದಲ್ಲಿ ತಮ್ಮ ತಂದೆ ತಾಯಂದಿರು ಕನ್ನಡವನ್ನೋ, ಹಿಂದಿಯನ್ನೋ ಅಥವಾ ಆಂಗ್ಲ ಭಾಷೆಗಳನ್ನೋ ಅವರವರ ವಿದ್ಯಾಮಟ್ಟಗನುಗುಣವಾಗಿ ಮನೆಯೊಳಗಿನ ವ್ಯವಹಾರಿಕ ಭಾಷೆಯನ್ನಾಗಿ ಪ್ರಾರಂಭಿಸಿ

ಮುಂದೆ ಅದು ಹಾಗೆನೇ ಮುಂದುವರಿದಿರಬಹುದು. ಆದರೆ ಅಂತಹ ತಂದೆ ತಾಯಂದಿರಿಗೂ ಮತ್ತು ನವ ಪೀಳಿಗೆಯವರಿಗೆ ಆದಿ ಮಾತೃಭಾಷೆಯ ಮೇಲೆ ಅಭಿಮಾನ ಬೇಕು. ಜನಾಂಗೀಯ ಬಾಂಧವರೊಂದಿಗೆ ವ್ಯವಹಾರ ಸಂಪರ್ಕಗಳ ಸಲುವಾಗಿಯೂ ಮತ್ತು ಜನಾಂಗದ ಅಭಿಮಾನದ ಮೇಲೆ ನಮ್ಮ ಅರೆಗನ್ನಡ ಭಾಷೆಯನ್ನು ಕಲಿಯಲೇಬೇಕು. ಅವರ ಜತೆಗೆ ಅವರ ಶೋಧನೆಯನ್ನು ನಡೆಸುವಂತಾಗಬೇಕು. ಕನ್ನಡನಾಡಿನ ಭಾಷೆ ಕನ್ನಡವನ್ನು ಮಾತೃಭಾಷೆಯಾಗಿಯೂ, ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಕಲಿತು ಬೆರೆತು ಬಾಳುವುದರೊಂದಿಗೆ ಇತರ ಭಾಷೆಗಳನ್ನೂ ಕಲಿಯುವ ಮೋಹವನ್ನು ಬೆಳೆಸಿಕೊಳ್ಳಬೇಕು 'ಕೊಡಗು ಸಂಗಾತಿ'ಯ ಹಿಂದಿನ [ಫೆಬ್ರವರಿ 98ರ] ಸಂಚಿಕೆಯಲ್ಲಿ ಶ್ರೀ ಬಾಚರಣಿಯಂಡ ಅಪ್ಪಣ್ಣನವರ 'ಅರೆಭಾಷೆಗೆ ಆಪತ್' ಎಂಬ ಲೇಖನದಲ್ಲಿ ಹೇಳಿರುವಂತೆ ನಮ್ಮ ಜನಾಂಗದ ಎಷ್ಟೋ ಬಾಂಧವರು ನಮ್ಮ ಅರೆಗನ್ನಡ ಭಾಷೆಗೆ [ಅರೆಭಾಷೆಗೆ] ಧಕ್ಕೆ ತರುತ್ತಿದ್ದಾರೆ. ಶ್ರೀಯುತರು ಅನ್ಯ ಸಂಸ್ಕೃತಿಯವರಾದರೂ ನಮ್ಮ ಅರೆಭಾಷೆಯ ಮೇಲಿರುವ ಅಭಿಮಾನಕ್ಕೆ ನಾವು ಸಂತೋಷಪಡಬೇಕು. ಭಾಷೆಗೆ ಧಕ್ಕೆ ತರುತ್ತಿರುವ ನಮ್ಮ ಜನಾಂಗದ ಬಾಂಧವರಿಗೆ ಅವರ ಲೇಖನ ಕಪಾಳ ಮೋಕ್ಷ ಮಾಡಿದೆ. ಇದು ನಮಗೆ ನಾಚಿಕೆಯ ವಿಷಯ.

ನಮ್ಮವರು ಇತ್ತೀಚಿನ ದಿನಗಳಲ್ಲಿ ಸಮಾಜದ ಕಲ್ಯಾಣ ಮಂಟಪಗಳಡಿಯಲ್ಲಿ ಲಗ್ನ ಕಾರ್ಯ ಮಾಡುವಾಗ ಅದೆಷ್ಟೋ ಸಂಸ್ಕೃತಿಯ ಉಲ್ಲಂಘನೆ ನಡೆಸುತ್ತಲೇ ಬರುತ್ತಿದ್ದಾರೆ. ದೇವರ ಫೋಟೋ ಮತ್ತು ತೂಗುದೀಪ [ದೇವರ ದೀಪ]ಇರುವ ಮದುವೆ ಮಂಟಪದಲ್ಲೇ ಶೂ ಚಪ್ಪಲಿಗಳನ್ನು ವಧೂ-ವರರು ಧರಿಸಿ ಅಲಂಕೃತರಾಗಿ ಕೂತಿರುವುದನ್ನು ನಾವುಗಳು ಕಾಣುತ್ತಿದ್ದೇವೆ. ತಲೆಗೆ ಅರತಕ್ಷತೆ ಪ್ರಧಾನ ಮಾಡುವ ಆ ವಿಶೇಷ ಸ್ಥಳದಲ್ಲಿ ವಧೂವರರು ಆ ರೀತಿ ಆಸೀನರಾಗಿ ಶೋಭಿಸುವುದು ಯಾವ ಸಂಸ್ಕೃತಿ? ಈ ತರಹದ ಅಸಂಸ್ಕೃತಿಯನ್ನು ನಮ್ಮ ಸಂಸ್ಕೃತಿ ಅಕಾಡಮಿಯವರು ಖಂಡಿಸಿ ತಿದ್ದಿ ಹೇಳಬೇಕಾದ್ದು ಅವರ ಆದ್ಯ ಕರ್ತವ್ಯ. ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯವೂ ಕೂಡಾ. ನಶಿಸಿಹೋಗುತ್ತಿರುವ ನಮ್ಮ ಜನಾಂಗದ ಆಚರಣೆ, ನಂಬಿಕೆ, ಸಂಪ್ರದಾಯಗಳ ಉಲ್ಲಂಘನೆಗೆ ಕಡಿವಾಣ ಹಾಕುವುದರೊಂದಿಗೆ ಈ ವಿಚಾರ ಸಂಕೀರ್ಣಕ್ಕಾಗಿ ಸಮಾಜದ ಹಿರಿಯ ಗಣ್ಯ ವ್ಯಕ್ತಿಗಳೂ ಮತ್ತು ಅಕಾಡಮಿಯ ಕಾರ್ಯ ಸಮಿತಿಯವರು ಒಂದೇ ವೇದಿಕೆಯಲ್ಲಿ ಒಂದುಗೂಡಿ ವಿಮರ್ಶಿಸಿ ಹೂವಾಗಿ ಅರಳದ ನಮ್ಮ ಸಂಸ್ಕೃತಿ ನಶಿಸಿ ಬೀಳದೆ, ಅದು ಅರಳಿ ತನ್ನ ಸುತ್ತಮುತ್ತಲಿನ ಪರಿಸರಕ್ಕೆಲ್ಲಾ ಪರಿಮಳವನ್ನು ಸೂಸುವಂತೆ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಕಾರ್ಯೋನ್ಮುಖರಾಗುವುದು ಒಳ್ಳೆಯದಲ್ಲವೇ.

ಆರೋಗ್ಯ ಚಿಂತನ

ಹುಳಿ ತೇಗು, ಜಠರದಲ್ಲಿ ಹುಣ್ಣು

ಡಾ॥ ಎನ್. ಎಸ್. ಪ್ರವೀಣ, [ಎಂ.ಡಿ.] ಮಡಿಕೇರಿ

ಹೊಟ್ಟೆ ಉರಿ, ಎದೆ ಉರಿ, ಹುಳಿತೇಗು, ಜಠರದ ಅಥವಾ ಕರುಳಿನ ಹುಣ್ಣು ಇತ್ಯಾದಿ ಕಾಯಿಲೆಗಳನ್ನು ಒಟ್ಟಾಗಿಸಿ ಜನಸಾಮಾನ್ಯರು 'ಗ್ಯಾಸ್ಟ್ರಿಕ್' ಎಂಬ ಹೆಸರಿನಿಂದ ಕರೆಯುತ್ತಾರೆ.

ಜಠರದಲ್ಲಿನ ಗ್ರಂಥಿಗಳು ಹೆಚ್ಚಿನ ಪ್ರಮಾಣದಲ್ಲಿ ಆಮ್ಲವನ್ನು ಉತ್ಪತ್ತಿಮಾಡುವುದೇ ಹುಳಿತೇಗು, ಜಠರದ ಹುಣ್ಣಿಗೆ ಪ್ರಮುಖ ಕಾರಣವಾಗಿದೆ. ಈ ಆಮ್ಲದ ಉತ್ಪತ್ತಿ ಹಲವಾರು ಅಂಶಗಳನ್ನು ಅವಲಂಬಿಸಿದೆ.

○ ವ್ಯಕ್ತಿಗೆ ಜಾಸ್ತಿ ಆತಂಕ, ಗಾಬರಿ, ಚಿಂತೆ ಇತ್ಯಾದಿ ಇದ್ದಲ್ಲಿ "ವೇಗಸ್" ಎಂಬ ನರ ಪ್ರಚೋದನೆಗೊಳ್ಳುತ್ತದೆ. ಇದರಿಂದಾಗಿ ಜಠರದಲ್ಲಿನ ಗ್ರಂಥಿಗಳು ಹೆಚ್ಚಿನ ಪ್ರಮಾಣದಲ್ಲಿ ಜಠರರಸವನ್ನು ಉತ್ಪತ್ತಿಮಾಡುತ್ತವೆ.

○ ಅತಿಯಾದ ಕರಿದ ಪದಾರ್ಥ, ಎಣ್ಣೆಭರಿತ ಪದಾರ್ಥ, ಮೆಣಸು, ಮಸಾಲೆ ಜಾಸ್ತಿ ಉಪಯೋಗಿಸುವಿಕೆ, ಕುಡಿತ [ಮದ್ಯಪಾನ], ಬೀಡಿ, ಸಿಗರೇಟ್ ಸೇವನೆ, ಕಾಫಿ, ಟೀ ಹೆಚ್ಚಾಗಿ ಕುಡಿಯುವಿಕೆ, ಸಮಯಕ್ಕೆ ಊಟಮಾಡದೆ ಇರುವುದು ಇವುಗಳಿಂದ ಸಹ ಜಠರದಲ್ಲಿ ಹೆಚ್ಚಾಗಿ ಆಮ್ಲ ಉತ್ಪತ್ತಿಯಾಗಿ ರೋಗಕ್ಕೆ ಕಾರಣವಾಗುತ್ತದೆ.

○ ಹೆಚ್ಚು ಆಮ್ಲ ಉತ್ಪತ್ತಿಯಾಗಿ ಮೊದಮೊದಲಿಗೆ ಹೊಟ್ಟೆ ಉರಿದಂತೆ, ಎದೆ ಉರಿದಂತೆ ಭಾಸವಾಗುತ್ತದೆ. ಇದನ್ನು ಕೆಲವರು ಹೃದಯರೋಗವೆಂದು ತಪ್ಪಾಗಿ ಭಾವಿಸುವುದುಂಟು. ವಿಪರೀತ ಆಮ್ಲದ ಉತ್ಪತ್ತಿ ಬಹಳ ಕಾಲದವರೆಗೆ ಮುಂದುವರಿದಲ್ಲಿ ಜಠರ ಅಥವಾ ಕರುಳಿನಲ್ಲಿ ಹುಣ್ಣಾಗುತ್ತದೆ.

ರೋಗ ತಡೆ ಮತ್ತು ಚಿಕಿತ್ಸೆ

ಹುಣ್ಣು, ಹುಳಿತೇಗು ಇರುವವರು ಕೆಲವೊಂದು ಆಹಾರ ಪಥ್ಯವನ್ನು ತಪ್ಪದೆ ಮಾಡಬೇಕು.

1. ಹುಣ್ಣನ್ನು ಕೆರಳಿಸುವಂತಹ ಖಾರ, ಮಸಾಲೆ ಪದಾರ್ಥ, ಎಣ್ಣೆಯಲ್ಲಿ ಕರಿದ ಆಹಾರ ಪದಾರ್ಥಗಳನ್ನು ತಿನ್ನಬಾರದು.

2. ಬೀಡಿ, ಸಿಗರೇಟ್ ಅಭ್ಯಾಸವನ್ನು ಸಂಪೂರ್ಣವಾಗಿ ತ್ಯಜಿಸಬೇಕು.

[13 ನೇ ಪುಟ ನೋಡಿ]

ಗೌಡಕೇಸರಿ ನಿಡ್ಯಮಲೆ ಮುದ್ದಪ್ಪನವರ ಜೀವನ ಚರಿತ್ರೆ ಭಾಗ-೪

ನೀಡ್ಯಮಲೆ ಜ್ಞಾನೇಶ್, ಸುಳ್ಯ

[ಹಿಂದಿನ ಸಂಚಿಕೆಯಿಂದ]

ಒಮ್ಮೆ ದಿ|| ಮುದ್ದಪ್ಪನವರು ಕೋರ್ಟ್ ಕೆಲಸ ಮುಗಿಸಿ ಮನೆಗೆ ತೆರಳುತ್ತಿರುವ ಸಂದರ್ಭದಲ್ಲಿ ಒಬ್ಬ ಹೆಡ್‌ಕಾನ್‌ಸ್ಟೇಬಲ್ ಸೈಕಲ್‌ನಲ್ಲಿ ಹೋಗುತ್ತಿದ್ದವನು ಇವರ ಕಾರನ್ನು ಕಂಡ ತಕ್ಷಣ ಸೈಕಲ್ ಮೇಲಿನಿಂದಲೇ ಒಂದು ಸೆಲ್ಯೂಟ್ ಹೊಡೆದ. ಇದು ಮುದ್ದಪ್ಪನವರ ಗಮನಕ್ಕೆ ಬಂದಾಗ ಡ್ರೈವರ್‌ನೊಂದಿಗೆ ಕಾರನ್ನು ಹಿಂದಕ್ಕೆ ತೆಗೆದುಕೊಂಡು ಹೋಗಲು ಹೇಳುವಷ್ಟರಲ್ಲಿ ಕಾನ್‌ಸ್ಟೇಬಲ್ ಸೈಕಲ್ಲಿಂದ ಇಳಿದು ಕಾರಿನ ಹತ್ತಿರಕ್ಕೆ ಬಂದ. ಮುದ್ದಪ್ಪನವರು ಅವನನ್ನು ಪ್ರಶ್ನಿಸಿ ಸೆಲ್ಯೂಟ್‌ನ ಅರ್ಥವೇನು ? ಎಂದು ಕೇಳಿದರು. ನೀನು ನನಗೆ ಸೆಲ್ಯೂಟ್ ಹೊಡೆದದ್ದೋ ಅಥವಾ ಕಾರಿಗೋ ? ಎಂದು ಕೇಳಿ ಆವನಿಗೆ ಇನ್ನು ಮುಂದಕ್ಕೆ ಹಾಗೆ ಮಾಡಬಾರದೆಂದು ಬುದ್ಧಿ ಹೇಳಿದರು. ಅವರಿಗೆ ಅವನು ಸೆಲ್ಯೂಟ್ ಮಾಡಿದ ಔಚಿತ್ಯ ಸರಿ ಕಾಣಲಿಲ್ಲ, ಕೇವಲ ಕಾರನ್ನು ಕಂಡ ತಕ್ಷಣ ಸೆಲ್ಯೂಟ್ ಹೊಡೆಯುವುದು ಸೆಲ್ಯೂಟಿಗೆ ಅಪಮಾನ ಮಾಡಿದಂತೆ ಎಂಬ ಭಾವನೆ ಅವರಲ್ಲಿತ್ತು. ಇದು ಅವರ ಶಿಸ್ತು ಮತ್ತು ನಿಯಮವನ್ನು ಪ್ರಸ್ತುತಪಡಿಸುತ್ತದೆ.

ಇನ್ನೊಂದು ಸಂದರ್ಭದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಭಾರತ ಸರ್ಕಾರದ ಅತೀ ಉನ್ನತ ಹುದ್ದೆಯಲ್ಲಿದ್ದ ಕೊಡಗಿನ ಅಧಿಕಾರಿಯೊಬ್ಬರು ಮಡಿಕೇರಿಯಲ್ಲಿ ಒಂದು ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಲು ಪ್ರಾರಂಭಿಸಿದಾಗ ಸಭಿಕರನ್ನು ಕೊಡಗರೆ, ತುಳುವರೆ ಎಂದು ಸಂಭೋಧಿಸಿದರು. ಮುಂದಿನ ಸಾಲಿನಲ್ಲಿ ಕುಳಿತಿದ್ದ ದಿ|| ಮುದ್ದಪ್ಪನವರಿಗೆ ಈ ಸಂಭೋಧನೆಯಿಂದ ಸಿಟ್ಟು ನೆತ್ತಿಗೇರಿ ಕುಳಿತಲ್ಲಿಂದ ಎದ್ದು ಅವನನ್ನು ಎಳೆಯಿರಿ, ಅವನಿಗೆ ನಾನು ಒದೆಯುತ್ತೇನೆ ಎಂದು ಹೌಹಾರಿದರಂತೆ. ಆಗ ಪಕ್ಕದಲ್ಲಿ ಕುಳಿತಿದ್ದ ಅಧಿಕಾರಿಗಳು ಮತ್ತು ಸ್ನೇಹಿತರು ಮುದ್ದಪ್ಪನವರನ್ನು ಸಮಾಧಾನಪಡಿಸಿದರು. ಆದರೂ ಅವರು ಕೂಡಲೇ ತಮ್ಮ ಆಸನದಿಂದ ಎದ್ದು ಸಭೆಯಿಂದ ಹೊರ ನಡೆದೇಬಿಟ್ಟಿದ್ದರು. ಅವರಿಗೆ ಕೋಪ ಬರಲು ಕಾರಣವೇನೆಂದರೆ ಅಂದಿನ ದಿನಗಳಲ್ಲಿ ಕೊಡಗಿನಲ್ಲಿರುವ ಗೌಡ ಜನಾಂಗದವರನ್ನು ಕೊಡಗರು ಹಿಯ್ಯಾಳಿಸಿ ತುಳುವರು, ಕೊಟ್ಟಪಾಳೆ ಎಂದು ಸಂಬೋಧಿಸುತ್ತಿದ್ದರು. ಇದರ ಅರ್ಥವೇನೆಂದರೆ ಗೌಡರು ದ. ಕ. ಜಿಲ್ಲೆಯಿಂದ ಬಂದವರು ಎಂಬುದಾಗಿತ್ತು. ಈ ಘಟನೆ ನಡೆದ ಮರುದಿವಸ ಆ ಹಿರಿಯ ಅಧಿಕಾರಿ ಮುದ್ದಪ್ಪನವರ ಮನೆಗೆ ಬಂದು ನಿನ್ನೆ ಆದ ಘಟನೆಯಿಂದ ನನಗೆ ಬೇಸರವಾಗಿದೆ. ದಯವಿಟ್ಟು ಕ್ಷಮಿಸಿಬಿಡಿ ಎಂದು ಕ್ಷಮೆಯಾಚಿಸಿ ಹೋದರಂತೆ. ಈ ಘಟನೆ ದಿ|| ಮುದ್ದಪ್ಪನವರಲ್ಲಿ ಇದ್ದ ಆತ್ಮಾಭಿಮಾನ ಮತ್ತು ಸ್ವಾಭಿಮಾನವನ್ನು ಎತ್ತಿತೋರಿಸುತ್ತದೆ.

ಇನ್ನೊಂದು ಸಂದರ್ಭದಲ್ಲಿ ಇವರ ಮನೆಗೆ ಅವರ ಪತ್ನಿಯ ಸಂಬಂಧಿಕರಾದ ಇಬ್ಬರು ಯುವಕರು ನೆಂಟಸ್ತಿಕೆಯಿಂದ ದಿ|| ಮುದ್ದಪ್ಪನವರ ಮನೆಗೆ ಬಂದಿದ್ದರಂತೆ. ಆ ಯುವಕರಲ್ಲಿ ಒಬ್ಬನ ತಲೆ ಕೂದಲು ತುಂಬಾ ಇದ್ದು ಇನ್ನೊಬ್ಬ ಗಡ್ಡ ಬಿಟ್ಟಿದ್ದನಂತೆ. ಆ ಯುವಕರನ್ನು ನೋಡಿದ ಕೂಡಲೇ ಮುದ್ದಪ್ಪನವರು ಅವರಿಗೆ ಜೇಬಿನಿಂದ ಹತ್ತು ರೂ.ಗಳ ಒಂದು ನೋಟನ್ನು ತೆಗೆದುಕೊಟ್ಟು ಮೊದಲು ಕ್ಷೌರ ಮಾಡಿಸಿಕೊಂಡು ಬನ್ನಿ ಎಂದು ಅಲ್ಲಿಂದಲೇ ಕಳುಹಿಸಿದನಂತೆ. ಈ ಘಟನೆ ಅವರಲ್ಲಿರುವ ಸೌಂದರ್ಯ ಪ್ರಜ್ಞೆ ಮತ್ತು ಶಿಸ್ತನ್ನು ಸಾರಿ ಹೇಳುತ್ತದೆ.

ದಿ|| ಮುದ್ದಪ್ಪನವರು ಕೊಡಗಿನಲ್ಲಿ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಕೊಡಗಿನ ಚೀಫ್ ಕಮೀಷನರಾಗಿದ್ದ ಲೆ|| ಕ|| ದಯಾಸಿಂಗ್ ಬೇಡಿ ಮುದ್ದಪ್ಪನವರಲ್ಲಿ ಕೋರ್ಟಿನ ಮೊಕದ್ದಮೆಗಳ ಅಂಕೆ ಸಂಖ್ಯೆಗಳು ಮತ್ತು ಕೇಸಿನ ನಿರ್ವಹಣೆ ಬಗ್ಗೆ ಪತ್ರ ಮುಖೇನ ವಿವರಣೆ ಕೇಳಿದರಂತೆ. ಇದು ಚೀಫ್ ಕಮೀಷನರ್ ಅಧಿಕಾರ ವ್ಯಾಪ್ತಿಯಲ್ಲಿ ಇಲ್ಲದಾಗಿತ್ತು. ಇದು ಮುದ್ದಪ್ಪನವರಿಗೆ ಸರಿ ಕಾಣಲಿಲ್ಲ. ಇವರು ಕೂಡಲೇ ಚೀಫ್ ಕಮಿಷನರಿಗೆ ಲಿಖಿತ ಉತ್ತರ ನೀಡಿ ಇದನ್ನು ನಿಮಗೆ ಕೊಡಲು ಸಾಧ್ಯವಿಲ್ಲ. ನನ್ನನ್ನು ಈ ಬಗ್ಗೆ ಕೇಳಲು ಹೈಕೋರ್ಟ್ ಇದೆ ಅವರಿಗೆ ನಾನು ಕೊಡಲು ಬದ್ಧ. ನಿಮಗಲ್ಲ ಎಂದು ತಮ್ಮ ಅಧಿಕಾರದ ಪರಿಮಿತಿಯನ್ನು ಆ ಅಧಿಕಾರಿಗೆ ಗೊತ್ತುಪಡಿಸಿದರು. ದಿ|| ಮುದ್ದಪ್ಪನವರು ತಮ್ಮ ನೇರ ನಡೆ ನುಡಿಗೆ ಹೇಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದರು ಎಂಬುದಕ್ಕೆ ಈ ಘಟನೆಯೇ ಒಂದು ಸಾಕ್ಷಿ.

ದಿ|| ಮುದ್ದಪ್ಪನವರು ಯಾರಿಗೂ ಅನ್ಯಾಯವಾಗುವ ರೀತಿಯಲ್ಲಿ ನಡೆದುಕೊಂಡವರಲ್ಲ. ಕಾನೂನು ಅಂದರೆ ಕಾನೂನು, ಅಧಿಕಾರವನ್ನು ಯಾರಾದರೂ ದುರುಪಯೋಗಪಡಿಸಿಕೊಂಡರೆ ಅವರು ಸಹಿಸುತ್ತಿರಲಿಲ್ಲ. ತಮ್ಮ ಅಧಿಕಾರ ವ್ಯಾಪ್ತಿ ಎಷ್ಟಿದೆಯೋ ಅಷ್ಟೆ ನಾವು ಚಲಾವಣೆ ಮಾಡಬೇಕು. ಅದಕ್ಕಿಂತ ಹೆಚ್ಚಿಗೆ ಮಾಡಬಾರದೆಂಬ ನ್ಯಾಯನಿಷ್ಠೆ ಅವರಲ್ಲಿ ಆಳವಾಗಿ ಬೇರೂರಿತ್ತು. ಅವರ ಜೀವನದಲ್ಲಿ ನಡೆದ ಇನ್ನಿತರ ಹಲವಾರು ಘಟನೆಗಳನ್ನು ಬರೆಯುತ್ತಾ ಹೋದರೆ ಬಹಳಷ್ಟು ಇದೆ.

[12ನೇ ಪುಟ ನೋಡಿ]

ವಿವೇಕವಾಣಿ :

ವಿದ್ಯಾರ್ಥಿಗಳೇ, ವಾರ್ಷಿಕ ಗುರಿ ನಿರ್ಧಾರ ಅಷ್ಟು ಅವಶ್ಯವೇ ? ಆ ನಿಟ್ಟಿನಲ್ಲಿ ನೀವು ಗಮನಿಸಬೇಕಾದ ಅಂಶಗಳು ಯಾವುವು ?

ಯಾವಾಗಲೂ ಗುರಿ ಇಲ್ಲದ ಬದುಕು ಒರೆಯಿಲ್ಲದ ಕತ್ತಿಯಂತೆ, ಚುಕ್ಕಾಣಿ ಇಲ್ಲದ ಹಡಗಿನಂತೆ ಅನಾಹುತವನ್ನು ಆಹ್ವಾನಿಸುವಂಥದ್ದು ಹಾಗೂ ಕೇಡನ್ನು ಉಂಟುಮಾಡುವಂಥದ್ದಲ್ಲವೇ? ಬಸ್ಸನ್ನು ಏರುವ ಪಯಣಿಗ ತಾನು ಎಲ್ಲಿಗೆ ಹೋಗ ಬೇಕೆಂಬುದು ತಿಳಿದಿರಬೇಕಾದ ವಿಷಯ ದಂತೆ ವಿದ್ಯಾರ್ಥಿಗೆ ತನ್ನ ಗುರಿ ಏನು ಎಂಬುದರ ಅರಿಯು ತಿಳಿವು ಇರಲೇಬೇಕಲ್ಲವೇ? ಈಗಿನ ಅದೇಷ್ಟೋ ವಿದ್ಯಾರ್ಥಿಗಳಿಗೆ ನಿರ್ಧಿಷ್ಟವಾದ ಗುರಿಯೇ ಇರುವುದಿಲ್ಲ. ತಾವು ಏತಕ್ಕಾಗಿ ಶಾಲಾ ಕಾಲೇಜುಗಳಿಗೆ ಹೋಗುತ್ತಿದ್ದೇವೆಂದೇ ಅವರಿಗೆ ಅರಿವಿರುವುದಿಲ್ಲ. ಗೊತ್ತು ಗುರಿ ಇಲ್ಲದ ಅವರ ಮರ್ಕಟ ಮನಸ್ಸೇ ಅವರನ್ನು ದುಶ್ಚಟಗಳ ದಾಸರನ್ನಾಗಿಸಿ, ಸಮಾಜಘಾತುಕ ಚಟುವಟಿಕೆಗಳಲ್ಲಿ ತೊಡಗಿಸುತ್ತಿದೆ ಎಂಬ ವಿಚಾರ ವಿಚಿತ್ರವಾದರೂ ಸತ್ಯವಾಗಿದೆ.

ಗುರಿ ನಿರ್ಧಾರ ಎನ್ನುವುದು ಕೇವಲ ಭ್ರಮೆ, ಕಲ್ಪನೆಗಳ ನೆರಳಿನಲ್ಲಾಗುವ ಕೆಲಸ ಅಲ್ಲ. ಅದು ಅವರವರ ಈವರೆಗಿನ ಸಾಧನೆ ಆಸಕ್ತಿಗಳ ಹಿನ್ನೆಲೆಯಲ್ಲೇ ಆಗಬೇಕಾದ ಕೆಲಸ. ಅವರಿವರ ಅನುಕರಣೆ-ಪ್ರೇರಣೆಗಳಲ್ಲಿ ಪ್ರಯೋಜನಕ್ಕೆ ಬಾರದವುಗಳು. ಗಣಿತದಲ್ಲಿ ಕಳೆದ ವರ್ಷ ಪಾಸ್‌ಮಾರ್ಕನ್ನಷ್ಟೆ ಗಳಿಸಿದ ವಿದ್ಯಾರ್ಥಿ ಈ ವರ್ಷ ಲೆಕ್ಕದಲ್ಲಿ ಹೆಚ್ಚು ಅಂಕ ಗಳಿಸಬೇಕೆನ್ನಿಸಿದರೆ ಅದು ಅಸ್ಪಷ್ಟ ಗುರಿಯಾದೀತು. ನೂರಕ್ಕೆ ನೂರು ಅಂಕ ಗಳಿಸಬೇಕೆನಿಸಿದರೆ ಅದು ಅಸಮರ್ಪಕ ಗುರಿ ಆದೀತು. ಜಗುಲಿ ಹಾರದವನು ಗಗನ ಹಾರುವ ಮಾತೆಲ್ಲಿ ಅಲ್ಲವೇ ? ಆದ್ದರಿಂದ ಅಂಥ ವಿದ್ಯಾರ್ಥಿ ಮೊದಲು ಗಣಿತದಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗುವ ಗುರಿ ಇಟ್ಟುಕೊಳ್ಳಬೇಕು. ಮೊದಲ ಪರೀಕ್ಷೆಯಲ್ಲಿ ಆತ ಅದನ್ನು ಸಾಧಿಸಿದಲ್ಲಿ ಆ ಗುರಿಗೆ ಭಕ್ತಿಕೊಟ್ಟು ಮುಂದಿನ ಪರೀಕ್ಷೆಯಲ್ಲಿ ಶೇ. 80 ಅಂಕಗಳಿಸುವ ಗುರಿಇಟ್ಟುಕೊಳ್ಳಬೇಕು. ಅದು ಕೈಗೂಡಿದಾಗ ಮಾತ್ರವೇ ಅಂತಿಮ ಪರೀಕ್ಷೆಯಲ್ಲಿ ನೂರು ಅಂಕಗಳಿಸಬೇಕೆಂಬ ಆತನ ಗುರಿಗೆ ಬೆಲೆ ಬಂದೀತು ಅಷ್ಟೆ. ಆದ್ದರಿಂದ ಕೇವಲ ಭ್ರಮಾಧೀನರಾಗಿ, ಹಗಲು ಗನಸು ಕಾಣುತ್ತಾ ಗುರಿ ನಿರ್ಧಾರ ಮಾಡುವುದರಿಂದೇನು ಫಲವಿಲ್ಲ.

ನೀವು ಕಲಿಯುವ ಒಂದು ವಿಚಾರದಲ್ಲಿ ಮಾತ್ರ ಅಲ್ಲ, ಎಲ್ಲ ವಿಚಾರಗಳಲ್ಲೂ, ಪಠ್ಯೇತರ ಚಟುವಟಿಕೆಗಳಲ್ಲೂ ವರ್ಷದ ಮೊದಲಿಗೇ "ಈ ವರ್ಷ ಇದರಲ್ಲಿ ನಾನಿದನ್ನು ಸಾಧಿಸಬೇಕು" ಎಂದು ನಿರ್ಧಾರ ಮಾಡಿ ಒಂದು ಪುಸ್ತಕದಲ್ಲಿ ಅವುಗಳನ್ನೆಲ್ಲಾ ಬರೆದಿಡಿ. ಹೀಗೆ ಬರೆದಿಡುವುದರಿಂದ ಬರೆದಿಟ್ಟದನ್ನು ಆಗಾಗ ನೋಡಲು ಅನುಕೂಲವಾಗಿ ಪದೇ ಪದೆ ಆ ಗುರಿಯನ್ನು ನೆನಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಆ ಗುರಿಯ ಚಿತ್ರ ನಿಮ್ಮ ಮನದಲ್ಲಿ ಸ್ಪಷ್ಟವಾಗಿ ಮೈದಳೆಯಲು ಅನುಕೂಲವಾಗಿ, ಹೊಗೆಯಾಡಿ ಧಗ್ಗೆಂದು ಹೊತ್ತಿಕೊಳ್ಳುವ ಬೆಂಕಿಯಂತೆ, ಸಾಧಿಸುವ ಉತ್ಕಟೇಚ್ಛೆ ನಿಮ್ಮಲ್ಲಿ ಹೊಮ್ಮಲು ಪ್ರೇರಕವಾಗುತ್ತದೆ. ನಿಖರವಾದ ಗುರಿಯ ಅಚಲ ನಿಲುವು ನಿಮ್ಮಲ್ಲಿ ಮೂಡಿತೆಂದರೆ ವರ್ಷಾಂತ್ಯದ ನಿಮ್ಮ ಸಾಧನೆಯ ಬೀಜ ಬಿತ್ತಿದಂತೆಯೇ ಎಂಬುದನ್ನು ಅರೆಭಾಷಿಕ ಗೌಡ ಜನಾಂಗದ ಮುಂಬರುವ, ಯುವ ಪೀಳಿಗೆಯ ಪ್ರಿಯ ವಿದ್ಯಾರ್ಥಿಗಳೆಂದು ಮರೆಯಬಾರದು. ○

ಪಟ್ಟಡ ಪ್ರಭಾಕರ್

ಆಸೆ

ಹಣ್ಣಾಗುವ ಆಸೆ
ಆದರೇನು ಮಾಡಲಿ,
ಹುಳಿ ಎಂದು
ಎಸೆಯುವರೋ ಎಂಬ ಭಯ.

ಹಕ್ಕಿಯಾಗುವ ಆಸೆ
ಆದರೇನು ಮಾಡಲಿ
ಎಲ್ಲಿ ನಾನು
ಬೇಟೆಗಾರನ ಬಲೆಗೆ ಸಿಗುವನೆಂಬ ಭಯ.

ಹಸುವಾಗುವ ಆಸೆ
ಆದರೇನು ಮಾಡಲಿ
ಕಾಡಿನಲ್ಲಿ ಎಲ್ಲಿ ನಾನು
ಹುಲಿಯ ಬಾಯಿಗೆ ಸಿಗುವೆನೋ ಎಂಬ
ಭಯ.

ಕವಿಯಾಗುವ ಆಸೆ
ಆದರೇನು ಮಾಡಲಿ
ಎಲ್ಲಿ ನನ್ನ ಕವಿತೆಗಳಿಗೆ
ಪ್ರಶಂಸೆ ಸಿಗುವುದಿಲ್ಲ ಎಂಬ ಭಯ.

ರಾಜಕಾರಣಿಯಾಗುವ ಆಸೆ
ಆದರೇನು ಮಾಡಲಿ
ಎಲ್ಲಿ ನನ್ನ ಮೇಲೆ
ಕೆಟ್ಟ ಅಪವಾದ ಹೊರಿಸುವರೆಂಬ ಭಯ.

ಈಗಿರುವ ಜನ್ಮವೇ ಸಾಕು
ಆದರೇನು ಮಾಡಲಿ
ನನಗೆಲ್ಲಿ ಯಾರಾದರೂ
ನಿಂಧನೆ ಮಾಡುವರೋ ಎಂಬ ಭಯ.

ದೇವರು ಕೊಟ್ಟ ಈ ಜನ್ಮ
ನನ್ನ ಹಿಂದಿನ ಜನ್ಮದ ಪುಣ್ಯ
ಆದರೇನು ಮಾಡಲಿ ದೇವರು ಕೊಟ್ಟ
ಪಾತ್ರವನ್ನು ಪೂರೈಸುವುದೇ ನನಗುಳಿ
ದಿರುವ ಆಸೆ.

–ಉಳುವಾರನ ಥನುಜ ಜನಾರ್ಧನ್,
ಹುಣಸೂರು.

ಗೌಡರ ವಿವಾಹ ಪದ್ಧತಿಯ ಶೋಬಾನೆಗಳು

[ಹಿಂದಿನ ಸಂಚಿಕೆಯಿಂದ]

ಇ) ಹಸೆಗೆ ಕರೆಯುವ ಹಾಡು :

ಬ್ರಹ್ಮನ ರಾಣಿಯು ಒಮ್ಮೆಗೆ ಬಲಗೊಂಡು ನಿರ್ಮಲ ಚಿತ್ತದಿ ಚರಣ ಕಮಲಗಳಿಗೆ ಎರಗಿ ಪೇಳುವೆನು । ಚಿನ್ನದ ಹಾವುಗೆ ಮೆಟ್ಟಿದ ಪಾದವು ಚೆನ್ನಾಗಿ ಮತಿಗಳ ಕರುಣಿಸು ಎಂದೆನುತ । ಚೆನ್ನಾಗಿ ಪಾದಕ್ಕೆರಗುವೆನು । ಎಡಬಲದಲ್ಲಿ ಸೂರ್ಯಚಂದ್ರಗಳು ಹೊಳೆಯುವ ಜಡೆ ಬಂಗಾರಿನ ರಾಕೂಟೆ ಗೊಂಡೆಗಳು । ಅರಳು ಮಲ್ಲಿಗೆಯಂತೆ ಅರಸಗಳಾಡುತ ವರಗಳ ಕೊಡುವ ಶ್ರೀ ಪಾರ್ವತಿಯಮ್ಮನ ಬರಹೇಳಿ ಹಸೆಗೆ ಕರೆದಾರು। ಚಿನ್ನದ ಮಣೆ ಪಂಕಜಮುಖಿ ಆಳುವ ಶ್ರೀ ಪಾವನತಿಯಮ್ಮನ ಬಿಂಕದಲಿ ಹಸೆಗೆ ಕರೆದಾರು । ಆನೆಯ ಸೊಂಡಿಲ ಹೋಲುವ ತೋಳಿಗೆ ಬಾಳೆಯ ಕುಪ್ಪುಸ ಭುಜ ಕೀರ್ತಿ ಇಂತೊಪ್ಪುವ ತೋಳು ಬಳೆಯು ಏಳು ಪಾರ್ವತಿಯಮ್ಮ ನೀವು ನಿಸ್ತ್ರೀವರು ಹಸೆಗೆ ಕರೆವಾರು । ವೇಷದಿ ಬಾವಿಯ ಮೇಲೆ ವೇಷದಿ ಕುಳ್ಳಿರಲು ಹಸುಳೆ ಪಾರ್ವತಿದೇವಿ ಬಂದು ಭಜಿಸಿದವರಿಗೆ ವರಕೊಟ್ಟು ರಕ್ಷಿಸು ಪಾರ್ವತಿಯಮ್ಮ ನೀವು ನಿಸ್ತ್ರೀವರು ಹಸಗೆ ಕರೆವಾರು। ಕಾಶಿಯ ಪುರದಿಂದ ನೀವು ಬಂದು ನೆನೆಸಿದವರಿಗೆ ವರಗಳ ಕೊಟ್ಟು ಪುತ್ರ ಸಂತಾನನ ನೀವು ಕೊಟ್ಟು । ರಕ್ಷಿಸು ಪಾರ್ವತಿಯಮ್ಮ ನೀವು ವನಿತೆಯರು ಹಸೆಗೆ ಕರೆವಾರು ॥

ಈ) ಹಸೆಗೆ ಕರೆಯುವ ಹಾಡು ;

ಹಸೆಗೆದ್ದು ಬಾ ನೀಲಮೇಘ ಶ್ಯಾಮ ಹಸೆಗೆದ್ದು ಬಾ । ಜನಕನಾ ಪುರಕೆ ಹೋಗಿ ಹರಧನುವ ಮುರಿದ ದೇವ ಜಾನಕಿಯ ಕರವ ಹಿಡಿದು ಭಕ್ತರನು ಪೊರೆದ ದೇವ । ಮಥುರೆಯಲ್ಲಿ ಪುಟ್ಟಿದನಂತೆ ಮಾವ ಕಂಸನ ಕೊಂದ ದೇವ ಮಾತಾಪಿತರ ಪೊರೆದ ದೇವ । ಹಸೆಗೆದ್ದು ಬಾ ಶೃಂಗಾರ ಶೀಲನೆ ಸಂಗೀತ ಲೋಲನೆ ರಂಗನಾಯಕಿ ಸಹಿತ ತುಂಗಪೀಠಕ್ಕೆ ಬಾ ಅಂಗನೆಯ ಕೂಡಿ ಮಂಗಳವ ಪಾಡಿ ಮುತ್ತಿನಾಕ್ಷತೆಗಳ ನೆತ್ತಿಯೊಳಿಡುತಲಿ ರಂಗ ಬಾ ಎನ್ನುವರು "ಹಸೆಗೆದ್ದು ಬಾ"

5. ಅಕ್ಕನ ಕರೆಯುವ ಹಾಡು :

ನಮ್ಮವರ ಮನೆಯಲ್ಲಿ ಸಣ್ಣವಂಗೆ ಸೋಬಾನ । ಅಕ್ಕನ ಕರೆಯಲಿಕೆ ಹೋಗೊದಾರೂ ಅಕ್ಕನ ಕರೆಯಲಿಕೆ ಹೋಗೊದಾರು ತಂದೆಪ್ಪ । ಏಳಾಳಿಗಿಂತ ಹಿರಿಯಣ್ಣಾ ಹೋಗಾಬೇಕು ॥ ಮಗನೇ ಅಕ್ಕನ ಕರಿಯಲಿಕೆ ಹೋಗಬೇಕು ॥ ೧ ॥ ಸೂಡಿ ಸೂಡಿ ವೀಳ್ಯವ ತೆಗೆದಾನು ಅಣ್ಣಯ್ಯ । ಕೀಲುಕೀಲೆ ಅಡಿಕೆ ತೆಗೆದಾನು । ಅಕ್ಕನ ಕರೆಯಲಿಕೆ ಹೊರಟಾನು ಅಣ್ಣಯ್ಯ । ವೀಳ್ಯವ ತೆಕ್ಕೊಂಡು ಹೊರಟಾನು । ಸಣ್ಣಕ್ಕಿ ಬಯಲಲ್ಲಿ ನಡೆದಾನು ಅಣ್ಣಯ್ಯಾ । ಅಕ್ಕಾನರಮನೆಗೆ ನಡೆದಾನು ॥ ೨ ॥ ಎದುರೀಗೆ ಹಾಲು ನೀರು ತಂದಾಳು ಹಿರಿಯಕ್ಕ ನೀರನ್ನೀ ತೆಗೆದು ಕೈ ಕಾಲು ಮುಖ ತೊಳೆದು । ಹಾಲನ್ನೀ ತೆಗೆದು ಬಾಯಾರಿಕೆ ಕಳೆದು ತೂಗುವ ಮಂಚದಲ್ಲಿ ಕೂತಾನೀಗ ॥ ೩ ॥ ವೀಳ್ಯವ ಕೊಟ್ಟಾಳು ಅಕ್ಕಯ್ಯ ವೀಳ್ಯವನ್ನೀಗ ಮೆದ್ದಾನು । ಬೆಳ್ಳಿಯ ಬರಿವಾಣ ತೆಗೆದು ವೀಳ್ಯವನಿರಿಸಿದನು ಅಣ್ಣಯ್ಯ । ನಮ್ಮವರ ಮನೇಲಿ ಸಣ್ಣವಂಗೆ ಸೋಬಾನ ಕಳಸಕನ್ನಡಿ ಹಿಡಿಯಲಿಕ್ಕೆ ಬರಾಬೇಕು ॥ ಕಳಸ ಕನ್ನಡಿ ಹಿಡಿಯಲಿಕೆ ಬರಬೇಕು ಅಕ್ಕಯ್ಯ ನಮ್ಮರಮನೆಗೆ ॥ ೪ ॥ ಕಡಿಕೆ ಭತ್ತವ ಬಿಟ್ಟು ತುಳುಕೆ ಹೊನ್ನನು ಬಿಟ್ಟು ನಾನ್ಹೇಗೆ ಬರಲಿ ತಮ್ಮಾ ಮದುವೆಗೆ ॥ ಕಡಿಕೆ ಭತ್ತಕೆ ಕಾವಲಿಗೆ ಜನಕೊಡುವೆ ತುಳಿಕೆ ಹೊನ್ನಿಗೂ ಜನ ಕೊಡುವೆ ಬಾರಕ್ಕ ಮನೆಯ ಮದೂವೆಗೆ ॥ ೫ ॥ ದೇವರಂತ ಮಾವನ ಬಿಟ್ಟು ಪಶುವಿನಂತ ಅತ್ತೆಯ ಬಿಟ್ಟು ನಾನ್ಹೆಗೆ ಬರಲಿ ತಮ್ಮಾ ಮದೂವೇಗೆ ॥ ದೇವರಂತ ಮಾವಗೆ ಅತ್ತೆಯವರಿಗೆ ದಂಡಿಗೆ ನಾ ಕೊಡುವೆ, ಬಾರಕ್ಕ ನಿಮ್ಮರಮನೆಗೆ ॥ ಬಾಳೆಯ ಸುಳಿಯಂತ ಪುರುಷನ ಬಿಟ್ಟು । ಗೆಜ್ಜೆಕೋಲು ಕುವರನ ನಾ ಬಿಟ್ಟು ನಾನೇಗೆ ಬರಲಿ ತಮ್ಮಾ ಮದೂವೆಗೆ ॥ ೬ ॥ ಬಾಳೆಯ ಸುಳಿಯಂತ ಪುರುಷನಿಗೆ ಕುದುರೆಯ ನಾ ಕೊಡುವೆ ಬಾರಕ್ಕ ನಮ್ಮರಮನೆಗೆ ॥ ಕರೆಯುವರು ಯಾರಿಲ್ಲ ಕಾಸುವರು ಯಾರಿಲ್ಲ । ನಾನೇಗೆ ಬರಲಿ ತಮ್ಮ ಮದುವೆಗೆ ॥ ೭ ॥ ಒಂದೂ ವೀಳ್ಯವ ಕೊಡವಲ್ಲಿಂದ । ಎರಡೂ ವೀಳ್ಯವ ಕೊಟ್ಟು ನೆರೆಮನೆಯಕ್ಕಂದಿರ ಕರೆಸಿಕೊ ತಮ್ಮಾ ಮದುವೆಗೆ ಬರೋದಿಲ್ಲ ॥ ಆಕಾಶಕ್ಕೆ ಅಡಿಯುಂಟು ಅಕ್ಕಯ್ಯ । ಭೂಮಿಗೆದಾರುಂಟು । ನಿನ್ನ ಮಾತಿಗೆ ಎಣೆಯಿಲ್ಲಾ ॥ ಅರಮನೆಯ ಮೆಟ್ಟಲನ್ನೆ ಇಳಿದಾನು ತಮ್ಮನು ತಿರುಗಿ ನೋಡದೆ ನಡೆದಾನು ಅರಮನೆಗೆ ॥ ೮ ॥ ತಾಯಮ್ಮ ಬಂದು ಕೇಳಿದಾಳು । ಅಕ್ಕ ಹಿರಿಯಕ್ಕ ಬರಾಲಿಲ್ಲ ಎಲೆ ಮಗನೆ॥ ಬರಲಿಲ್ಲವೆಂದು ಹೇಳಿದಾನು ನೆರೆಮನೆಗೆ ಹೋದಾನು ಅಣ್ಣಯ್ಯ । ಒಂದು ವೀಳ್ಯವ ಕೊಡುವಲ್ಲಿಂದ । ಎರಡು ವೀಳ್ಯವ ಕೊಟ್ಟು ಕಳಸ ಕನ್ನಡಿ ಹಿಡಿಯಲಿಕೆ ಬರಾಬೇಕು ॥ ಕಳಸ ಕನ್ನಡಿ ಹಿಡಿಯಲಿಕೆ ಬರಬೇಕು ಅಕ್ಕಂದಿರ ಹಾಗೆಂದು ಹೇಳಿ ಹೋದಾನೀಗ ॥ ಕಳಸ ಕನ್ನಡಿ ಹಿಡಿದಾರೀಗ ಅಕ್ಕಂದಿರು । ಕಳಸ ಕನ್ನಡಿ ಹಿಡಿದಾರು ॥ ದಿಬ್ಬಣವನೆ ಹೊರಟಾರು । ಅಷ್ಟೆಂಬ ಹೊತ್ತಿನಲಿ ಗೆಜ್ಜೆ ಕಾಲು ಕುವರನು ಸುಂಟೆ ಸುಳಿಯಾಗೆ ಬಳಕುತ ।

ನಿಡ್ಯಮಲೆ ಮುದ್ದಪ್ಪನವರ ಜೀವನ ಚರಿತ್ರೆ

[9ನೇ ಪುಟದಿಂದ ಮುಂದುವರೆದಿದೆ]

ಇವರ ಜೀವನದಲ್ಲಿ ಬಂದ ಅತ್ಯಂತ ದುಃಖದ ಕ್ಷಣವೆಂದರೆ ತನ್ನ ಅಣ್ಣ ಬೆಳ್ಯಪ್ಪನವರ ನಿಧನ. ಅವರಿಗೆ ಅಣ್ಣನಲ್ಲಿ ಬಹಳಷ್ಟು ಪ್ರೇಮ ಇತ್ತು. ನನ್ನ ಏಳಿಗೆಯನ್ನು ನೋಡಲು ಅವರು ಇಲ್ಲವಲ್ಲ ಎಂಬ ಕೊರಗು ಅವರನ್ನು ಕಾಡುತ್ತಿತ್ತು. ಇನ್ನೊಂದು ಬಹಳ ದುಃಖಕರ ಕ್ಷಣ ಎಂದರೆ ಅವರು ನ್ಯಾಯಾಧೀಶರಾಗಿದ್ದಾಗಲೇ ತಮ್ಮ ಶ್ರೀಮತಿ ದೇವಮ್ಮನವರು ವಿಧಿವಶರಾದುದು. [1045ನೇ ಇಸವಿಯಲ್ಲಿ] ಆ ಸಂದರ್ಭದಲ್ಲಿ ಅವರ ದುಃಖ ಪರಮಾವಧಿಯನ್ನು ಏರಿತು. ಯಾಕೆಂದರೆ ತನ್ನ ಏಳಿಗೆಗೆ ಪತ್ನಿಯ ಬೆಂಬಲವೇ ಕಾರಣ ಎಂದು ತಿಳಿದಿದ್ದರು. ಪತ್ನಿ ತೀರಿಕೊಂಡ ಮೇಲೆ ಕುಟುಂಬ ನಿರ್ವಹಣೆಯ ಎಲ್ಲಾ ಜವಾಬ್ದಾರಿ ಮುದ್ದಪ್ಪನವರದ್ದೇ ಆಗಿತ್ತು. ಎಲ್ಲಾ ಮಕ್ಕಳಿಗೂ ತಕ್ಕ ವಿದ್ಯಾಭ್ಯಾಸವನ್ನು ಕೊಡಿಸಿದರು. ಈಗಲೂ ಇವರ ಪುತ್ರಿಯರು ಮತ್ತು ಮೊಮ್ಮಕ್ಕಳು ದೇಶ ವಿದೇಶಗಳಲ್ಲಿ ನೆಲೆಸಿ ತಂದೆಯವರಿಗೆ ತಕ್ಕ ಮಕ್ಕಳಾಗಿ ದುಡಿಯುತ್ತಿದ್ದಾರೆ. ಇವರ ದೊಡ್ಡ ಸೊಸೆ ಐವನಾರ್ಡಿನ ಆಸ್ತಿಯನ್ನು ನೋಡಿಕೊಂಡು ನೆಲೆಸಿದ್ದಾರೆ. ಪತ್ನಿ ಸ್ವರ್ಗಸ್ಥರಾದ ಮೇಲೆ ಮುದ್ದಪ್ಪನವರ ಆರೋಗ್ಯವು ಹದಗೆಟ್ಟಿತು. ಇವರಿಗೆ ರೋಗಗಳಲ್ಲಿ ದೊಡ್ಡಣ್ಣನಾದ ಕ್ಯಾನ್ಸರ್ ಕಾಯಿಲೆ ಅಂಟಿಕೊಂಡಿತು. ಹಲವಾರು ತಜ್ಞ ವೈದ್ಯರುಗಳಿಂದ ಚಿಕಿತ್ಸೆ ಮಾಡಿಸಿದರೂ ಫಲಕಾರಿಯಾಗದೆ 1953ನೇ ಇಸವಿ ಏಪ್ರಿಲ್ ತಿಂಗಳ 10ನೇ ತಾರೀಖಿನಂದು ಗೌಡ ಜನಾಂಗದ ಮೇರು ವ್ಯಕ್ತಿ ಸತ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ದುಡಿದು ಅವರ ಧೀರ, ಶೂರ, ಸಾಹಸ ಪ್ರವೃತ್ತಿಗಳಿಂದ ಜನಮನ ಗೆದ್ದ ನಿಡ್ಯಮಲೆ ರಾಮಪ್ಪನವರ ಪುತ್ರ ಶ್ರೀಮಾನ್ ಮುದ್ದಪ್ಪನವರು ದೈವಾಧೀನರಾದರು. ಆದರೆ ಇವರು ಮಾಡಿದ ಜನೋಪಕಾರ, ಗೌಡ ಸಮಾಜದ ಅಭಿವೃದ್ಧಿಗೆ ದುಡಿದ ಕೀರ್ತಿ ಇಂದಿಗೂ ಎಲ್ಲರ ಮನೆಮಾತಾಗಿದೆ. ಇವರು ತಮ್ಮ ಜೀವಿತ ಕಾಲದಲ್ಲಿ ಗಳಿಸಿದ ಹೆಸರಿನ ಬಲದಿಂದಲೇ ಈಗಲೂ ನಿಡ್ಯಮಲೆ ಮನೆತನ ತನ್ನ ಶ್ರೇಷ್ಠತೆಯನ್ನು ಉಳಿಸಿಕೊಂಡಿದೆ. ○

ಕೊಡಗು ಸಂಗಾತಿ

ಅಂದು ನಿಂತಿದ್ದೆ ಗೌಡಕೇಸರಿಯಲ್ಲಿ
ಇಂದು ನೀನಿರುವೆ ಅರೆಭಾಷಿಕ
ಕೊಡಗು ಸಂಗಾತಿಯಾಗಿ
ಎಂದೆಂದೂ ನೆಲೆಸಿರು ಗೌಡ ಜನಾಂಗದ ಮನದಲ್ಲಿ
ನಿನ್ನನ್ನು ಬೆಳೆಸಲಿ ಪತ್ರಿಕೆ ರಂಗದಲ್ಲಿ

○ ಸಬ್ಬಂಡ್ರ ಆರ್. ಶರತ್‌ಕುಮಾರ್

ಸನಾತನ ಧರ್ಮ

[6ನೇ ಪುಟದಿಂದ ಮುಂದುವರೆದಿದೆ]

ಎಲ್ಲ ಸಜೀವ ಮತ್ತು ನಿರ್ಜೀವ ವಸ್ತುಗಳು, ಅದರ [ಅಂತಿಮ ಸತ್ಯ] ಪ್ರಕಟಿತ ರೂಪಗಳಾಗಿದ್ದು ಪ್ರತಿಯೊಂದೂ, ಅವಿನಾಶಿಯಾದ ವೈಯಕ್ತಿಕ ಆತ್ಮವನ್ನು ಹೊಂದಿದೆ. ಕರ್ಮವು ಕಾರ್ಯ-ಕಾರಣ ಸಂಬಂಧದ ತತ್ವವಾಗಿದ್ದು ಅದರಂತೆ ಆತ್ಮದ ಪಥವು ನಿರ್ಧರಿಸಲ್ಪಡುತ್ತದೆ. ಒಂದು ಆತ್ಮವು ತನ್ನ ಸತ್ಕಾರ್ಯಗಳಿಂದಾಗಿ ಪ್ರಾಪಂಚಿಕ ವ್ಯಾಮೋಹದಿಂದ ಇಲ್ಲವೆ ವಿವಿಧ ಶರೀರದಲ್ಲಿ ಹುಟ್ಟುವ ಮತ್ತು ಪುನಃ ಹುಟ್ಟುವ ವರ್ತುಲದಿಂದ ಬಿಡುಗಡೆ ಮಾಡಲ್ಪಟ್ಟರೆ ಬ್ರಹ್ಮನ್ ದೊಡನೆ ಲೀನವಾಗುವ ಪುಣ್ಯವನ್ನು ಪಡೆಯುವುದು. ಇದಕ್ಕೆ ಮೋಕ್ಷ ಇಲ್ಲವೆ ವಿಮೋಚನೆ ಎಂದು ಕರೆಯಲಾಗಿದೆ.

ಹಿಂದೂ ಧರ್ಮದ ಸಂಸ್ಥಾಪಕನಾದ ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಧರ್ಮದ ಬಗ್ಗೆ ವ್ಯಾಖ್ಯಾನಿಸಿದ್ದಾನೆ. ಧರ್ಮವು ಕೆಟ್ಟಾಗ ನಾನು ಪುನಃ ಹುಟ್ಟುವೆನು ಎಂದು ಹೇಳಿದ್ದಾನೆ.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮ ಧರ್ಮಸ್ಯ ತದಾತ್ಮಾನಾಂ ಸೃಜಾಮ್ಯಹಂ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ ।
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

["ಯಾವ ಯಾವ ಕಾಲದಲ್ಲಿ ಧರ್ಮಗ್ಲಾನಿಯಾಗಿ ಅಧರ್ಮವು ಹೆಚ್ಚಾಗುತ್ತದೋ ಆಗ ನಾನು ಅಧರ್ಮವನ್ನು ಅಡಗಿಸಲು ಜನ್ಮ ತಾಳುವೆನು. ಸಾಧುಗಳ ರಕ್ಷಣೆಗಾಗಿಯೂ ದುಷ್ಟರ ವಿನಾಶಕ್ಕಾಗಿಯೂ ಮತ್ತು ಧರ್ಮದ ಸಂಸ್ಥಾಪನೆಗಾಗಿಯೂ ನಾನು ಯುಗ ಯುಗಗಳಲ್ಲಿ ಹುಟ್ಟುವೆನು"] ●

:-: ನಗೆ ಹನಿ :-:

ಗಂಡ-ಹೆಂಡತಿ ಅಂಗಡಿಯೊಂದರಲ್ಲಿ

ಗಂಡ–ನೀನು ಅವನನ್ನು ನೋಡಿ ನಕ್ಕಿದ್ದೇಕೆ ?


ಹೆಂಡತಿ–ನೀವು ನಕ್ಕರಲ್ಲ ಅದಕ್ಕೆ ನಾನು ಸಹ ನಗಾಡಿದೆ

ಗಂಡ–ಅದು ಸರಿ, ಈಗ ಸ್ವಲ್ಪ ಸಮಯದ ಹಿಂದೆ ನಾನು ಒಬ್ಬಳನ್ನು ನೋಡಿ ನಗಾಡಿದೆನಲ್ಲ ? ಆಗ ನೀನು ನಕ್ಕಿಲ್ಲ !

ಹೆಂಡತಿ–ಆಗ ನಾನು ನಿಮ್ಮ ಮುಖನನ್ನೇ ನೋಡುತಿದ್ದ ನನಗೆ ನಗಲು ಸಮಯ ಸಿಗಲಿಲ್ಲ.

○ ಕೊಂಪುಳೀರ ವಿಷ್ಣು ದೇವಯ್ಯ
ಐಕೊಳ

ಪದಬಂಧ-2



ಎಡದಿಂದ ಬಲಕ್ಕೆ

2 ಸಾವಿನ ಕಾರಣ ತಿಳಿಯಲು ಇದು ಅಗತ್ಯ-5
4 ಹಾಲಿನಿಂದ ಮಾಡುವ ಈ ತಿಂಡಿ ಬಲು ರುಚಿ–2
5 ಇದನ್ನು ಅಳೆಯಲು ಕಿಲೋಮೀಟರ್ ಮಾನ ಬಳಸುತ್ತಾರೆ-2
6 ಮಳೆಗೆ ಇದು ಕಾರಣ–2
7 ವಾಹನದ ಸಿಲಿಂಡರ್ ಒಳಗಿರುವ ಭಾಗ–3
8 ಈ ಧ್ರುವದ ತೀವ್ರ ಕೊರತೆಯಾದರೆ ಸಾವು ಬರುತ್ತದೆ-2
9 'ಕೈ ಕೆಸರಾದರೆ ಬಾಯಿ ಮೊಸರು' ಇದರ ಮಹತ್ವವನ್ನು ಸಾರುತ್ತದೆ–2
11 ಕಾಡುಕುರುಬರು ಇದನ್ನು ಸಂಗ್ರಹಿಸುವುದರಲ್ಲಿ ನಿಸ್ಸೀಮರು–2
13 ಇದು ಬಹಳ ಉಪಯುಕ್ತ ಲೋಹ–3
14 ಗೌರವದಿಂದ ಬಾಳಲು ಇದು ಅಗತ್ಯ–4

ಮೇಲಿನಿಂದ ಕೆಳಕ್ಕೆ

1 ಇದನ್ನು 'ಕಲ್ಪವೃಕ್ಷ'ವೆಂದೂ ಕರೆಯುತ್ತಾರೆ–5
2 ದೇಹದ ಬೆಳವಣಿಗೆಗೆ ಇವು ಅಗತ್ಯ–5
3 ಇದು ಹಾರುವುದರಲ್ಲಿ ಪರಿಣಿತಿ ಪಡೆದಿದೆ–2
10 ಇದು ಆರೋಗ್ಯಕ್ಕೆ ಹಾನಿಕರ–4
12 ಇದು ಹೆಚ್ಚಾಗಿ ಮನೆಗಳಲ್ಲಿ ಗೂಡು ಕಟ್ಟುತ್ತದೆ–2

○ **ಬೈತಡ್ಕ ಕೆ. ಶ್ರೀಧರ, ಪುತ್ತೂರು**

(8ನೇ ಪುಟದಿಂದ ಮುಂದುವರೆದುದು

ಆರೋಗ್ಯ ಚಿಂತನ

3. ಕಾಫಿ, ಟೀ ಹೆಚ್ಚಾಗಿ ಕುಡಿಯಬಾರದು.

4. ಹೊತ್ತಿಗೆ ಸರಿಯಾಗಿ ಊಟಮಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು.

5. ಚಿಂತೆ, ಗಾಬರಿ, ಉದ್ವೇಗ ಆತಂಕಕ್ಕೆ ಈಡಾಗಬಾರದು. ಯಾವಾಗಲೂ ಶಾಂತವಾಗಿರಬೇಕು.

6. "ನೋವು ನಿವಾರಕ" ಮಾತ್ರೆ [ಆಸ್ಪಿರಿನ್ Aspirin ಬ್ರುಫೆನ್ Brufen] ಇತ್ಯಾದಿ ಅತಿಯಾಗಿ ಉಪಯೋಗಿಸಬಾರದು.

7. ಎಂಟಾಸಿಡ್ (Antacid) ಗಳು ಉದಾ : ಡೈಜಿನ್ (Digene), ಜೆಲುಸಿಲ್ (Gelusil) ಇತ್ಯಾದಿ ಎದೆ ಉರಿ ಕಡಿಮೆ ಮಾಡುವಲ್ಲಿ ಸಹಕಾರಿಯಾಗಿವೆ.

8. ವೈದ್ಯರ ಸಲಹೆಯಂತೆ ಜಠರದ ಆಮ್ಲದ ಉತ್ಪಾದನೆಯನ್ನು ಕಡಿಮೆಮಾಡಲು ರಾನಿಟಿಡಿನ್ [Ranitidine], ಫೆಮೋಟಿಡಿನ್ [Famotidine] ಇತ್ಯಾದಿ ಮಾತ್ರೆಗಳನ್ನು ಪ್ರತಿದಿನವೂ ಹಲವು ಸಮಯದವರೆಗೆ ಉಪಯೋಗಿಸ ಬೇಕಾಗಬಹುದು.

ಮಾತ್ರೆಗಳನ್ನು ನೀಡಿಯೂ ಹುಣ್ಣು ಗುಣವಾಗದಿದ್ದಲ್ಲಿ, ಹುಣ್ಣು ಬಹಳ ವರ್ಷಗಳಿಂದ ಇದ್ದಲ್ಲಿ, ಹುಣ್ಣಿನ ಜೊತೆಗೆ ರೋಗಿಗೆ ಪ್ರತಿದಿನವೂ ವಾಂತಿಯಿದ್ದಲ್ಲಿ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಇದರಿಂದ ರೋಗಿ ಪೂರ್ತಿ ಗುಣಮುಖವಾಗಿ ಮತ್ತೆ ಎಲ್ಲರಂತೆ ಆಗಲು ಸಾಧ್ಯ. ○

ಪದಬಂಧ-1ರ ಉತ್ತರ

ಎಡದಿಂದ ಬಲಕ್ಕೆ

1. ನಂಗಾರು 2. ದೇವಂಗೋಡಿ 3. ಮುಂಡೋಡಿ 4. ಚೊಕ್ಕಾಡಿ 5. ಕರ್ಣಯ್ಯನ 6. ನಡುಬೆಟ್ಟ 7. ಅಂಚೆ 8. ದೋಲುಪಾಡಿ 9. ಕೇಟೋಳಿ 10. ಕುಂಭಗೌಡನ 11. ಉಳುವಾರನ

ಮೇಲಿನಿಂದ ಕೆಳಕ್ಕೆ

12. ದೇವಾಜನ 13. ಉಡುದೋಳಿ 14. ಪೊನ್ನೇಟಿ 15. ಪಟ್ಟಡ 16. ಪೈಕೇರ 17. ತಡಿಯಪ್ಪನ

ಉದ್ಯೋಗ ವಾರ್ತೆ :

ಸೇನೆಗೆ ಭರ್ತಿ

ಸೇನೆಗೆ [ಮದ್ರಾಸ್ ರಿಜಿಮೆಂಟ್] ಸೇರಲಿಚ್ಛಿಸುವ ಅರ್ಹ ಅಭ್ಯರ್ಥಿಗಳು ದಿನಾಂಕ 8-8-98 ಮತ್ತು 9-8-98ರಂದು ಬೆಳಿಗ್ಗೆ ಹಾಸನದ ಪೊಲೀಸ್ ಮೈದಾನದಲ್ಲಿ ಹಾಜರಾಗತಕ್ಕದ್ದು. ಅಭ್ಯರ್ಥಿಗಳು ಎಸ್. ಎಸ್. ಎಲ್. ಸಿ.ಯಲ್ಲಿ ಪಾಸಾಗಿದ್ದು, ತೂಕ 50 ಕೆ.ಜಿ. ಇದ್ದು, ಎತ್ತರ 165 ಸೆಂ.ಮೀ. ಹಾಗೂ ಎದೆಯ ಸುತ್ತಳತೆ 77 ಸೆಂ.ಮೀ. ಇರಬೇಕು. ವಯಸ್ಸು 16 ರಿಂದ 21 ವರ್ಷದೊಳಗೆ ಇರತಕ್ಕದ್ದು. ಆಸಕ್ತ ಅಭ್ಯರ್ಥಿಗಳು ಮೇಲೆ ತಿಳಿಸಿದ ದಿನಾಂಕದಂದು ತಮ್ಮ ದಾಖಲಾತಿ ಪತ್ರಗಳೊಂದಿಗೆ ಹಾಜರಾಗತಕ್ಕದ್ದು.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

1998-99ನೇ ಸಾಲಿನ ವಿಶ್ವ ಯೋಜನೆಯಲ್ಲಿ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು 10-8-98ರೊಳಗಾಗಿ ಅರ್ಜಿಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ ಮಡಿಕೇರಿ, ತಾಲ್ಲೂಕು ಕೈಗಾರಿಕಾ ಕೇಂದ್ರ ಮಡಿಕೇರಿ, ಕುಶಾಲನಗರ, ವೀರಾಜಪೇಟೆ ಕಚೇರಿಗಳಿಗೆ ಸಲ್ಲಿಸಲು ಕೋರಲಾಗಿದೆ.

ಅಭ್ಯರ್ಥಿಗಳು 18ರಿಂದ 35 ವರ್ಷದೊಳಗಿನವರಾಗಿದ್ದು, ಕನಿಷ್ಟ 7ನೇ ತರಗತಿ ವ್ಯಾಸಂಗವುಳ್ಳವರಾಗಿರಬೇಕು. ತರಬೇತಿ 6 ತಿಂಗಳ ಅವಧಿಯದಾಗಿದ್ದು, ತಿಂಗಳಿಗೆ 300 ರೂ. ತರಬೇತಿ ಭತ್ಯ ನೀಡಲಾಗುವುದು.

ಕಂಪ್ಯೂಟರ್, ಉಲ್ಲನ್ ನಿಟ್ಟಿಂಗ್, ಉಲ್ಲನ್‌ಕಾರ್ಪೆಟ್, ಹ್ಯಾಂಡ್‌ಲೂಂ ತರಬೇತಿ, ಬಿದಿರು ವಸ್ತುಗಳ ತಯಾರಿಕೆ, ಸಿದ್ಧ ಉಡುಪು ತಯಾರಿಕೆ ತರಬೇತಿ ನೀಡಲಾಗುವುದು. ಕಂಪ್ಯೂಟರ್ ತರಬೇತಿಗೆ ಎಸ್. ಎಸ್. ಎಲ್. ಸಿ. ಪಾಸಾಗಿರಬೇಕು. ಹೆಚ್ಚಿನ ವಿವರಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರ, ತಾಲೂಕು ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಸಿಂಧುತ್ವ ಪ್ರಮಾಣ ಪತ್ರ ಅರ್ಜಿ ಆಹ್ವಾನ

1998-99ನೇ ಸಾಲಿಗೆ ಅನ್ವಯವಾಗುವಂತೆ ಕೊಡಗು ಜಿಲ್ಲೆಯಿಂದ ವೈದ್ಯಕೀಯ ಹಾಗೂ ತಾಂತ್ರಿಕ ಕೋರ್ಸುಗಳ ಪ್ರವೇಶ ಪರೀಕ್ಷೆಗೆ ಹಾಜರಾಗಿ ತೇರ್ಗಡೆ ಹೊಂದಿರುವ ಹಿಂದುಳಿದ ವರ್ಗಗಳ ಪ್ರವರ್ಗ-1,2(ಎ), 2(ಬಿ), 3(ಎ) ಹಾಗೂ 3[ಬಿ] ಮೀಸಲಾತಿಯಡಿ ಮೇಲ್ಕಂಡ ತರಗತಿಗಳಿಗೆ ಪ್ರವೇಶ ಬಯಸಿರುವ ಅಭ್ಯರ್ಥಿಗಳು ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಮಡಿಕೇರಿಯ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ಅಧಿಕಾರಿಯವರಿಗೆ ನಿಗದಿತ ನಮೂನೆಯಲ್ಲಿ ಮಾಹಿತಿಗಳೊಂದಿಗೆ ಅರ್ಜಿ ಸಲ್ಲಿಸಿ ಪಡೆಯಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಮಳೆ ಬಂದಿತ್ತಣ್ಣಾ

ಎಲ್ಲೂ ಇಲ್ಲದ ಮಳೆ ಬಂದಿತಣ್ಣಾ
ಹೊಲದಲ್ಲಿ ಚಿಗುರು ಬೆಳೆಯಿತ್ತಣ್ಣಾ ।
ಹೊಲದಲ್ಲಿ ಚಿಗುರು ಬೆಳೆಯೊದು ಕಂಡು
ಕುರುಬನು ಕುರಿಗಳ ಹೊಡೆದನಣ್ಣಾ ॥

ಕುರುಬನು ಕುರಿಗಳ ಹೊಡೆಯೊದು ಕಂಡು
ಕುರುಬತಿ ಬುತ್ತಿಯನ್ನು ತಂದಳಣ್ಣಾ ।
ಕುರುಬತಿ ಬುತ್ತಿಯನ್ನು ತರುವುದು ಕಂಡು
ಕುರುಬನು ಊಟಕ್ಕೆ ಕುಳಿತಳಣ್ಣಾ ॥

ಕುರುಬನು ಊಟಕ್ಕೆ ಕುಳಿತದು ಕಂಡು
ತೋಳಣ್ಣ ಕುರಿಗಳ ಹೊತ್ತಿತಣ್ಣಾ ।
ತೋಳಣ್ಣ ಕುರಿಗಳ ಹೊರುವುದು ಕಂಡು
ಕುರುಬತಿ ಬಿಕ್ಕಿ ಬಿಕ್ಕಿ ಅತ್ತಳಣ್ಣಾ ॥

○ ಕೂಡಕಂಡಿ ಪೂವಮ್ಮ ಅಪ್ಪಾಜಿ, ಮಡಿಕೇರಿ

ಪ್ರೀತಿಸಿದೆ

ಅಮ್ಮ ನೀ ಉಟ್ಟ ಸೀರೆ ಸಿಮ್ಲಾದ್ದು
ತೊಟ್ಟ ಬಳೆ ಬಂಗಾಳದ್ದು
ಇಟ್ಟ ಕುಂಕುಮ ಕಾಶ್ಮೀರದ್ದು
ಆದ್ರೆ ನಿನ್ನ ಹೃದಯ ಮಾತ್ರ ಕನ್ನಡದ್ದು
ಅದಕ್ಕಾಗಿ ನಾ ನಿನ್ನ ಪ್ರೀತಿಸಿದೆ.

ಮುಳ್ಳನ ಎಸ್. ವಸಂತ್, ಮಕ್ಕಂದೂರು.

ನಿಮ್ಮ ಪತ್ರಗಳು

50ನೇ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಕೊಡುಗೆಯಾಗಿ ಗೌಡ ಸಮಾಜ ಮತ್ತು ವಿದ್ಯಾಸಂಘ ವಿಲೀನ ಸಾಧ್ಯವೆ ?

ದೇಶದ ರಕ್ಷಣೆ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಪ್ರತಿಯೊಬ್ಬನು ತನ್ನ ದೇಶಕ್ಕಾಗಿ ಹೋರಾಡುವುದು ಅವನ ದೇಶಾಭಿಮಾನವನ್ನು ಸೂಚಿಸುತ್ತದೆ. ಹಾಗೆಯೇ ಪ್ರತಿಯೊಬ್ಬ ತಮ್ಮ ಜನಾಂಗವನ್ನು ರಕ್ಷಿಸಿಕೊಳ್ಳಲು ಸಮಾಜ, ಸಂಘ, ಸಂಸ್ಥೆಗಳನ್ನು ಕಟ್ಟಿಕೊಂಡು ಜನಾಂಗವನ್ನು ಒಗ್ಗೂಡಿಸಿ ಜನಾಂಗದ ರಕ್ಷಣೆಗೆ ಶ್ರಮಿಸುವುದು ಇಂದಿನ ಪ್ರಪಂಚದಲ್ಲಿ ಸರ್ವೆ ಸಾಮಾನ್ಯವಾಗಿದೆ. ಈ ದಿಸೆಯಲ್ಲಿ ಪ್ರತಿಯೊಂದು ಜನಾಂಗಕ್ಕೆ ಒಂದು ಸಮಾಜದ ಅಗತ್ಯವಿರುವಾಗ ನಮ್ಮ ಅರೆಭಾಷೆ ಗೌಡರಿಗೆ ಬೇಡವೆ ? ಬೇಕೇ ಬೇಕು. ಅದು ಗೌಡ ಸ ಾಜ.

ಕೊಡಗು ಗೌಡ ವಿದ್ಯಾಸಂಸ್ಥೆ ಮತ್ತು ಕೊಡಗು ಗೌಡ ಸಮಾಜ ಈ ಎರಡರ ಬಗ್ಗೆ ಸರಿಯಾದ ಅರಿವು ಜನಾಂಗಕ್ಕೆ ಇಲ್ಲ. ಕೆಲವರು ವಿದ್ಯಾ ಸಂಘವನ್ನು ಸ ಮಾ ಜ ವೆಂದು ತಿಳಿದಿರುವುದು ಸತ್ಯ. ಮಡಿಕೇರಿಯಲ್ಲಿ ವಿದ್ಯಾಸಂಘ ಮತ್ತು ಸಮಾಜ ಎರಡೂ ಇದೆ ಎಂದರೆ ಕೆಲವರಿಗೆ ಗೊತ್ತೇ ಇಲ್ಲ. ಇನ್ನೂ ಕೆಲವರು ವಿದ್ಯಾಸಂಘವನ್ನು ಸಮಾಜವೆಂದು, ಸಮಾಜವನ್ನು ವಿದ್ಯಾಸಂಘವೆಂದು ಕರೆಯುತ್ತಿರುವುದು ಸಹ ಕೇಳಿಬಂದಿದೆ. ಆ ದ ರೆ ಇಲ್ಲಿ ವಿದ್ಯಾಸಂಘದ ಸ್ಥಾಪನೆ ಮೊದಲು 1908ರಲ್ಲಿ ಆದರೆ ಗೌಡ ಸಮಾಜದ ಸ್ಥಾಪನೆ ನಂತರ. ಅಂದರೆ ಅಪ್ಪನಿಗಿಂತ ಮಗನೇ ಮೊದಲು ಹುಟ್ಟಿದಂತಾಗಿದೆ. ಹಾಗಿರುವಾಗ ಒಂದೇ ಜನಾಂಗದ ಎರಡು ಸಂಸ್ಥೆಗಳು ಜನಾಂಗಕ್ಕೆ ಅಗತ್ಯವೇ ? ಎರಡು ಸಂಸ್ಥೆಗಳಿಗೆ ಒಂದೇ ಜನಾಂಗದವರು ಬೇರೆ ಬೇರೆ ಸದಸ್ಯರಾಗಿರುವುದು ಸೂಕ್ತವೇ ? [ತಪ್ಪೇನಿಲ್ಲ, ಪ್ರಜಾಪ್ರಭುತ್ವದ ನಮ್ಮ ದೇ ಶ ದ ಲ್ಲಿ ಹತ್ತು ಸಂಸ್ಥೆಯ ಸದಸ್ಯರಾಗಬಹುದು.] ಅದು ಎಷ್ಟು ಸರಿ. ವಿದ್ಯಾಸಂಘದವರು ಅವರದೇ ಆದ ರೀತಿಯಲ್ಲಿ ಬೆಳವಣಿಗೆಯನ್ನು ಕಂಡರೆ ಸಮಾಜದವರು ಇನ್ನೊಂದು ರೀತಿಯಲ್ಲಿ ಬೆಳವಣಿಗೆಯನ್ನು ಕಾಣಬಯಸಿದೆ. ಆದರೆ ಈ ಎರಡು ಬೆಳವಣಿಗೆ ಒಂದೇ ಆದರೂ ಬೇರೆ ಬೇರೆ ಹೆಸರಿನಲ್ಲಿ ಜನಾಂಗವನ್ನು ಇರುಸು/ಮುರುಸುಗೆ ಒಳಪಡಿಸುತ್ತಿರುವುದು ಸರಿಯಲ್ಲ. ಒಂದುಕಡೆ ವಿದ್ಯಾಸಂಘ ಜನಾಂಗದ ಸಹಾಯಕ್ಕೆ ಕೈಚಾಚಿದರೆ, ಇನ್ನೊಂದೆಡೆ ಸಮಾಜ ಸಹಾಯಕ್ಕಾಗಿ ಕರೆನೀಡುತ್ತದೆ. ಆಗ ಎರಡು ಕಡೆಗೆ ನಮ್ಮ ಜನಾಂಗ ಹೇಗೆ ತಾನೆ ಸ್ಪಂದಿಸಲು ಸಾಧ್ಯ. ನೀವೇ ಹೇಳಿ. ಇದು ಆಗಬಾರದು.

ಪ್ರತಿಯೊಂದು ಜನಾಂಗಕ್ಕೆ ಅವರವರ ಸಮಾಜವೇ ಸರ್ವೋಚ್ಚ. ಜನಾಂಗದ ಸರ್ವರೂ ಇದರ ಸದಸ್ಯರೇ. ಜನಾಂಗದ ಪ್ರತಿಯೊಂದು ಅಭಿವೃದ್ಧಿ ಕೆಲಸ ಕಾರ್ಯಗಳು ನಮ್ಮ ಸಮಾಜದಿಂದಲೇ ನಡೆಯಬೇಕು. ಈ ಸಮಾಜದ ಕೈಕೆಳಗೆ ಉಳಿದಿರುವ ಸಂ ಘ ಸಂಸ್ಥೆಗಳು ಬರಬೇಕು. ಹೀಗಿದ್ದರೆ ಒಂದು ಜನಾಂಗ ಸಮಾಜದಡಿಯಲ್ಲಿ ಮುಂದುವರಿಯುವುದಲ್ಲದೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆಟೋಟ, ಕಲೆ ಹಾಗೂ ಇನ್ನಿತ್ಯಾದಿ ರೀತಿಯಲ್ಲಿ ಮೇಲೇಳಲು ಸಾಧ್ಯ. ಹಾಗಾಗದಿದ್ದರೆ ಬೇರೆ ಬೇರೆ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಒಂದು ನಿರ್ಧಿಷ್ಟ ಗುರಿಯನ್ನು ತಲುಪುವುದು ಖಂಡಿತಾ ಸಾಧ್ಯವಿಲ್ಲವೆಂದು ನನ್ನ ಅನಿಸಿಕೆ.

ನಮ್ಮಲ್ಲಿಯೂ ಸ ಹ ಸಮಾಜವೇ ಸರ್ವೋಚ್ಚವಾಗಿರಬೇಕು. ಈ ಸಮಾಜಕ್ಕೆ ವಿದ್ಯಾಸಂಘ, ಸಾಂಸ್ಕೃತಿಕ ಅಕಾಡೆಮಿ, ಮಹಿಳಾ ಸಂಘಟನೆ, ಸಾಂಸ್ಕೃತಿಕ ಸಮಿತಿಗಳು ಒಳಪಡಬೇಕು. ಈ ಪ್ರತಿಯೊಂದು ವಿಭಾಗಕ್ಕೂ ಅದರದೆ ಆದ ಅಧ್ಯಕ್ಷರು, ಕಮಿಟಿಯವರು ಇರಲಿ. ಈ ಪ್ರತಿಯೊಂದು ಸಂಸ್ಥೆಗಳು ಸಮಾಜದ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸುವುದಲ್ಲದೆ ಇದಕ್ಕೆ ಬೇಕಾದ ಸಂಪನ್ಮೂಲಗಳನ್ನು ಸಮಾಜವೇ ಒದಗಿಸುವಂತಾಗಬೇಕು. ಸಂಪನ್ಮೂಲವನ್ನು ಕ್ರೋಡಿಕರಿಸುವುದಕ್ಕೆ ಸಮಾಜ ಮೊದಲ ಆದ್ಯತೆ ಕೊಡಬೇಕು. ಸಮಾಜದ ಅ ಧ್ಯ ಕ್ಷ ರು ಹಾಗೂ ಕಾರ್ಯಕಾರಿ ಮಂಡಳಿಯವರು

ತಡಿಯಪ್ಪನ ಕುಮಾರಜಯ,
ಮೈಸೂರು

ಜನಾಂಗವನ್ನು ಆಗಿಂದಾಗ್ಗೆ ಸಂಪರ್ಕಿಸಿ ಸಮಾಜದ ಧ್ಯೇಯೋದ್ಧೇಶಗಳನ್ನು ತಿಳಿಹೇಳಿ ತಮ್ಮ ಕೈಲಾದ ಸಹಾಯವನ್ನು ನೀಡುವಂತೆ ಮನವಿ ಮಾಡಬೇಕು. ಜನಾಂಗದ ದೃಷ್ಟಿಯಲ್ಲಿ ಸಮಾಜದ ತೀರ್ಮಾನವೇ ಅಂತಿಮವಾದದು. ಅಲ್ಲದೆ ಇದನ್ನು ಗೌಡ ಜನಾಂಗ ಪಾಲಿಸಬೇಕು. ನಮ್ಮ ಸಮಾಜ ಮುಖ್ಯಮಂತ್ರಿಗಳಂತೆ ಇದ್ದು, ಸಂ ಘ ಸಂಸ್ಥೆಗಳನ್ನು ಕ್ಯಾಬಿನೆಟ್ ಮಂತ್ರಿಗಳನ್ನಾಗಿ ಮಾಡಿ, ಚಿಕ್ಕಪುಟ್ಟ ಸಂಘ ಸಂಸ್ಥೆಗಳನ್ನು ರಾಜ್ಯ ಮಂತ್ರಿಗಳನ್ನಾಗಿ ಮಾಡಬೇಕು. ವಿದ್ಯಾಸಂಘವನ್ನು ಶಿಕ್ಷಣ ಸಂಸ್ಥೆಯಡಿಯಲ್ಲಿ ಜನಾಂಗದ ಯೋಗಕ್ಷೇಮ, ಕುಂದುಕೊರತೆಗಳನ್ನು ವಿಚಾರಿಸಲು ಸಮಾಜ ಕಲ್ಯಾಣ ಸಂಸ್ಥೆ, ಹೀಗೆ ಪ್ರತಿಯೊಂದು ಸಂಸ್ಥೆಗಳನ್ನು ಒಂದೊಂದು ಹೆಸರಿನಲ್ಲಿ ತಂದು ಜನಾಂಗದ ಹಿತ ಕಾಯುವುದು ಬಹಳ ಉತ್ತಮ ಕೆಲಸವೂ, ಸುಲಭವೂ ಸಹ. ಸಮಾಜದ ಅಧ್ಯಕ್ಷರನ್ನು ಹಾಗೂ ಕಾರ್ಯಕಾರಿ ಮಂಡಳಿಯವರನ್ನು ಈ ಸಂಘ ಸಂಸ್ಥೆಗಳ ಕಾರ್ಯಕಾರಿ ಮಂಡಳಿಯವರು ಆರಿಸುವಂತಿರಬೇಕು. ಇಲ್ಲದಿದ್ದರೆ

ನೇರವಾಗಿ ಚುನಾಯಿಸಬಹುದು. ಸಂಘ ಸಂಸ್ಥೆಗಳ ಕಾರ್ಯಕಾರಿ ಮಂಡಳಿಯವರನ್ನು ಅಧ್ಯಕ್ಷರೆ ನಾಮಕರಣ ಮಾಡಬಹುದು, ಇಲ್ಲವೇ ಅದಕ್ಕೂ ಚುನಾವಣೆ ನಡೆಸಬಹುದು.

ಇನ್ನು ಹಣ ಕ್ರೋಡಿಕರಿಸಲು ಜನಾಂಗದ ಪ್ರತಿಯೊಬ್ಬರನ್ನು (18 ವರ್ಷ ಮೇಲ್ಪಟ್ಟ) ಸದಸ್ಯರಾಗಿ ನೋಂದಾಯಿಸುವುದು. ಇದು ಪ್ರತಿಯೊಂದು ಗ್ರಾಮ ಮಟ್ಟದಿಂದ ಬರಬೇಕು. ಕೊಡಗಿನಿಂದ ಹೊರಗಡೆ ನೆಲೆಸಿರುವವರನ್ನು ಸಹ ಸದಸ್ಯರನ್ನಾಗಿಸಬೇಕು. ಈ ಸದಸ್ಯತ್ವವನ್ನು ನೋಂದಾಯಿಸಿದ ನಂತರ ಕೈಲಾದ ಧನ ಸಹಾಯ ಕೇಳುವುದು. ಆ ಧನ ಸಹಾಯ ಪ್ರತಿಯೊಬ್ಬರು ಕೊಡಲೇಬೇಕು. (5-10 ರೂಪಾಯಿಯಾದರೂ ಸರಿ.) ಒಂದು ಸಾರಿ ಧನ ಸಹಾಯ ಕೇಳಿದ ನಂತರ ಸದ್ಯ ಎರಡು ಅಥವ ಮೂರುವರ್ಷ ಧನಸಹಾಯ ಕೇಳಬಾರದು. ಸದಸ್ಯತ್ವ ನೋಂದಣಿ ಜಾರಿಯಲ್ಲಿ ಬರಬೇಕು. ಜನಾಂಗವ ಅಭಿವೃದ್ಧಿ ಕಾರ್ಯದಲ್ಲಿ ವಿನಿಯೋಗಿಸಲು ಈ ಹಣ ಬೇಕಾದಷ್ಟು ಆದ ಹಾಗೆ. ಇದರಲ್ಲಿ ಒಂದು ಕೋ-ಆಪರೇಟಿವ್ ಸೊಸೈಟಿ, (ಬ್ಯಾಂಕ್ ಒಳಗೊಂಡಂತೆ) ಆದಾಯ ವೃದ್ಧಿಯಾಗುವ ಯಾವುದೇ ವ್ಯಾಪಾರ, ಕೆಲಸಗಳನ್ನು ನಡೆಯಿಸುವುದಲ್ಲದೆ ಅದರಿಂದ ಜನಾಂಗದವರಿಗೆ ಉದ್ಯೋಗ ಸೃಷ್ಟಿಸಿದಂತಾಗುತ್ತದೆ. ಈ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಗೌಡ ಜನಾಂಗ ಯಾರಿಗೇನು ಕಡಿಮೆ.

ಆದುದರಿಂದ ವಿದ್ಯಾಸಂಘ ಮತ್ತು ಸಮಾಜದ ವಿಲೀನದಿಂದ ನವ ಸಮಾಜ ನಿರ್ಮಾಣಕ್ಕೆ ನಾಂದಿಯಾಗಲಿ. ಇದು ಇವೆರಡೂ ವಿಲೀನವಾಗಲು ಏಕೆ ಕಷ್ಟ? ಇದು ಯಾರೊಬ್ಬರ ವೈಯಕ್ತಿಕ ಆಸ್ತಿಯಲ್ಲ. ಸಮಾಜ ಮತ್ತು ಸಂಘ ಜನಾಂಗದ್ದೆ ಅಲ್ಲವೇ? ಅಧ್ಯಕ್ಷರು ಹಾಗೂ ಕಾರ್ಯಕಾರಿ ಮಂಡಳಿಯವರು ಬರುತ್ತಾರೆ, ಹೋಗುತ್ತಾರೆ. ಇಲ್ಲಿ ಯಾರು ಶಾಶ್ವತವಲ್ಲ. ಅಂದ ಮೇಲೆ ಏಕೆ ವಿಲೀನದ ಪ್ರಶ್ನೆ ಬರುವುದಿಲ್ಲ. ಎಲ್ಲರೂ ಜನಾಂಗಕ್ಕೋಸ್ಕರ ದುಡಿಯುತ್ತಿರುವುದರಿಂದ ಜೊತೆ ಸೇರಿ ಒಂದೇ ವೇದಿಕೆಯಡಿಯಲ್ಲಿ ದುಡಿಯೋಣ. ಇದರಿಂದ ಯಾರಿಗೂ ನಷ್ಟವಿಲ್ಲವಲ್ಲ. ಸಮಾಜ ಮತ್ತು ಸಂಘದ ಶಕ್ತಿ ವೃದ್ಧಿಯಾಗುತ್ತದೆ. ಅಭಿವೃದ್ಧಿ ಕಾರ್ಯಗಳು ಪಾದರಸದಂತೆ ನಡೆಯುವುದಲ್ಲದೆ ಪ್ರತಿಯೊಬ್ಬನಿಗೂ ಜನಾಂಗದ ಬಗ್ಗೆ ವಿಶ್ವಾಸ ಮೂಡುತ್ತದೆ. ಈ ಒಂದು ಕೆಲಸ ಈ ಕೂಡಲೇ ನೆರವೇರಿದರೆ ಸಮಾಜ ಮತ್ತು ಸಂಘದ ಆಡಳಿತ ಮಂಡಳಿಯವರು ಜನಾಂಗಕ್ಕೆ ಮಾಡುವ ದೊಡ್ಡ ಉಪಕಾರವಲ್ಲದೆ, ನಮ್ಮ ಮುಂದಿನ ಪೀಳಿಗೆಯನ್ನು ನೆಮ್ಮದಿಯಿಂದ ಇರಲು ಬಿಟ್ಟಂತೆ ಅಲ್ಲವೆ? ಹೀಗೆ ಮುಂದುವರಿದರೆ ನಮ್ಮ ಮುಂದಿನ ಪೀಳಿಗೆಯವರು ಎರಡು ಸಂಘ ಸಂಸ್ಥೆಗಳಲ್ಲಿ ದ್ವೇಶ ಸಾದಿಸಬಹುದು. ಅಲ್ಲದೆ ಬೇರೆ ಜನಾಂಗಕ್ಕೆ ಅಪಹಾಸ್ಯ ಮಾಡಲು ಸುವರ್ಣಾವಕಾಶ ನೀಡಿದಂತೆ ಆಗುತ್ತದೆ. ಈ ಒಂದು ಅವಕಾಶವನ್ನು ಸಮಾಜದ ಮತ್ತು ವಿದ್ಯಾಸಂಘದ ಕಾರ್ಯಕಾರಿ ಮಂಡಳಿ ಉಪಯೋಗಿಸಿಕೊಂಡು ಜನಾಂಗದ ಸರ್ವಕಾಲಿಕ ಪ್ರಶಂಸೆಗೆ ಪಾತ್ರರಾಗುವುದು ಅಲ್ಲದೆ ಕೊಡಗು ನಾಡಿನ ಗೌಡರ ಚರಿತ್ರೆಯನ್ನು ನಮ್ಮ ಮುಂದಿನ ಪೀಳಿಗೆ ಓದಿ ಹೆಮ್ಮೆ ಪಡಲು ಒಂದು ಅವಕಾಶ ಏಕೆ ಕೊಡಬಾರದು? ಈ ಒಂದು ಸುವರ್ಣಾವಕಾಶವನ್ನು ನೀವೇಕೆ ಉಪಯೋಗಿಸಿಕೊಳ್ಳಬಾರದು? ಅಲ್ಲದೆ ಜನಾಂಗಕ್ಕೆ ಈ ಸುವರ್ಣಾವಕಾಶವನ್ನು ಏಕೆ ಒದಗಿಸಬಾರದು? ಇದು ನನ್ನ ವೈಯಕ್ತಿಕ ಹಾಗೂ ಹಲವು ಜನರ ಅಭಿಪ್ರಾಯ. ಇದನ್ನು ಮಾನ್ಯ ಮಾಡುವುದು, ಬಿಡುವುದು ಸಮಾಜದ ಹಾಗೂ ವಿದ್ಯಾಸಂಘದ ಕಾರ್ಯಕಾರಿ ಮಂಡಳಿಗೆ ಬಿಟ್ಟದ್ದು. ಏನೇ ಮಾಡಿದರೂ ಅದರಲ್ಲಿ ಜನಾಂಗದ ಹಿತ ಅಡಗಿರಲಿ. ಇದು ನನ್ನ ಪ್ರಾರ್ಥನೆ. ಇದಕ್ಕೆ ಸಮಾಜ ಮತ್ತು ವಿದ್ಯಾಸಂಘದವರು ಹೇಗೆ ಸ್ಪಂದಿಸುತ್ತಾರೆ. ಕಾದು ನೋಡೋಣವೇ?

ತಡಿಯಪ್ಪನ ಕುಮಾರ್ ಜಯ,
ಮೈಸೂರು

ಸ್ವಾಗತಾರ್ಹ ಕ್ರಮ

ಗೌಡಸಮಾಜ ಮತ್ತು ವಿದ್ಯಾಸಂಘದ ಬಗ್ಗೆ ಲೇಖನ ಬರೆದು ಎಚ್ಚರಿಸಿದ ಶ್ರೀ ಇಂದ್ರಕುಮಾರ್‌ರವರಿಗೂ ಮತ್ತು ರಮೇಶ್‌ರವರಿಗೂ ಹೃತ್ಪೂರ್ವಕ ವಂದನೆಗಳು. ಮುಂದೆಯೂ ಕೊಡಗು ಸಂಗಾತಿಯಲ್ಲಿ ಇಂತಹ ಲೇಖನಗಳು ಪ್ರಕಟಗೊಂಡು ಗೌಡಸಮಾಜ ಮತ್ತು ವಿದ್ಯಾಸಂಘಗಳು ಜನಪರ ಕೆಲಸ ಕಾರ್ಯವನ್ನು ನಿರ್ವಹಿಸುವಂತಾಗಲಿ ಎಂದು ಹಾರೈಸುವ.

○ ಆಜಡ್ಕ ಎಂ. ಪ್ರಕಾಶ್,
ಮೈಸೂರು

ನವದೇವ ರತ್ನಗಳು

* ಚಿಂತೆಗಳನ್ನು ನಿವಾರಿರುವ ಮಣಿ -ಚಿಂತಾಮಣಿ
* ಸರ್ವರೋಗಗಳನ್ನು ನಿವಾರಿಸುವ ಮಣಿ-ಆರೋಗ್ಯ ಮಣಿ
* ಹಸಿವು ಬಾಯಾರಿಕೆಗಳನ್ನು ನಿವಾರಿಸುವ ಮಣಿ-ಅಮೃತಮಣಿ
* ಸದಾ ಸುಗಂಧ ಪರಿಮಳವನ್ನು ಬೀರುವ ಮಣಿ-ಗಂಧ ಮಣಿ
* ಮುಟ್ಟಿದ ಲೋಹಗಳೆಲ್ಲ ಚಿನ್ನವಾಗಿಸುವ ಮಣಿ-ನಾಗಮಣಿ
* ಸತ್ತವರನ್ನ ಬದುಕಿಸುವ ಮಣಿ -ಸಂಜೀವಿನಿ ಮಣಿ
* ಸಮಸ್ತ ಭಾಗಗಳನ್ನು ಕೊಡುವ ಮಣಿ-ಕೌಸ್ತುಭ ಮಣಿ

○ ಮುಕ್ಕಾಟಿ ಮಮತಾ ಪೂಣಚ್ಚ,
ಹೊಸ್ಕೇರಿ.

ಅರೆ ಭಾಷಿಕ ವಿಭಾಗ

ಸುಳಿ

ಸಾಮಾನ್ಯವಾಗಿ ಮೊದುವೆ - ಮುಂಜಿ 'ಇಂತ ಜಂಬರಗಳಿಗೆಲ್ಲ ನಾನ್ ಹೋದು ಬಾಳ ಕಮ್ಮಿ. ಮನ್ನೆ ನಮ್ಮ ಖಾಸ ನೆಂಟ್ರ ಮನೆಲೊಂದು ಮೊದುವೆ. ಅದ್ಕ ಹೋಗದ ಇರ್ಕ್ಕೊ ಬೊತ್ತ್, ಹಂಗೇ ಹೋಕೆ ಮನ್ಸ್ ಇಲ್ಲದಿದ್ರೂ ಹೋದೆ. ಅಲ್ಲಿ ಹಿಂಗೇ ಮಾತಾಡಿಕಂಡಿರ್ಕನ ದೊಡ್ಡ ಮನ್ಸರೊಬ್ಬರ ಪರಿಚಯ ಆತ್. ಬಾಳ ತಿಳುವಳಿಕೆ ಇರೋವು

ಚಾಂಗನ ಚಂ. ಪೂವಯ್ಯ

ಮತ್ತೆ ಎಲ್ಲವುಕೂ ಬಾಳ ಬೇಕಾದವು. ಆದರೆ ಅಂದ್ ಮಾತ್ರ ಅವು ಬಾಳಬ್ಯಾಜಾರಲಿದ್ದೊ. ಆ ಸಂಗತಿನ ಇಲ್ಲಿ ಸೊಲ್ಪಹೇಳ್ನೆ.

ತಲೆಗೆ ಚೆಕ್ ವಸ್ತ್ರ, ಕರೀ ಕೋಟು, ನೆಸೆ ಕಲರ್ ಸುರಾಲ್ ಹಾಕಿ ಚಪ್ಪರದಡಿಲಿ ಒಂದು ಮೂಲೆಲಿ ಕುರ್ಚಿ ಮ್ಯಾಲೆ ಕಾಲ್ ಮ್ಯಾಲೆ ಕಾಲ್ ಹಾಕಂಡ್, ಎಲ್ಯೆಡ್ನೆ ಅಗ್ಯಿತ ಎಂತದೋ ಗ್ಯಾನ ಮಾಡೊವಂಗೆ ಎತ್ತಲೊ ನೋಡಿಕಂಡ್ ಒಬ್ಬ ಅಜ್ಜ ಕುದ್ದಿದೋ. ಚಪ್ಪರದ ಸೊಪ್ಪು ಸೆರೆಂದ ಸೂರ್ಯನ ಬೆಳ್ಕ್ ಅವು ಕಿವಿಲಿ ಹಾಕಂಡಿದ್ದ ವಂಟೆ ಹರ್ಳ್ಯನ ವಾಲೆಗಳ ಮ್ಯಾಲೆ ಬೀಳ್ಕ್ಕನ ಅದ್ ಪಳಪಳಾಂತ ಹೊಳ್ಯತ್ತಿತ್ತ್. ಒಂದು ಮರದಕಾಲ್‌ನ ಕೊಡೆನೂ, ಒಂದ್ ಬೆತ್ತದ ದೊಣ್ಣೆನೂ ಆ ಕುರ್ಚಿಗೆ ಒರ್ಗಿಸಿ ಮೊಡಿಕ್ಯಂಡಿದ್ದೊ. ಇದ್ಯಾವ ಅಜ್ಜಪ್ಪ ? ದೂರಲಿ ಒಬ್ಬನೇ ಕುದ್ಂಕಂಡುಟ್ಟಲ ಅಂತ ಗ್ಯಾನ ಮಾಡಿಕಂಡ್ ನನ್ನೊಟ್ಟಿಗೆ ಬಂದಿದ್ದ ಚಡ್ಡಿ ದೋಸ್ತಿ ತಮ್ಮಯ್ಯನ ಕೇಳ್ದೆ. ನೀ ಯೆಂತ ಮಾರಾಯ, ನಮ್ಮ ಸ್ವಾಂಪಜ್ಜನ ಗೊತ್ಲೆತೇಳಿಯುಲ ! ನೀ ಹೆಗ್ಗಣನಂಗೆ ಮೂಲೆಲಿ ಹೊಕ್ಯಂಡಿದ್ದರೆ ನಿಂಗೆ ಯಾರ್ನ ಗೊತ್ತಾದೆ ಹೇಳ್ ? ಬಾ ಪೋಯಿ. ಅಜ್ಜನ ಮಾತಾಡ್ಸಿಕಂಡ್ ಬಾಪ್ನೋ. ಅವರ ಮಾತ್ ನೀನ್ ಕೇಳಿ ನೋಡೊಕು, ಯಂತಾ ರಸ ಇದ್ದದೆ ಗೊತ್ತುಟಾ? ಅಂತ ಹೇಳಿ ಅತ್ತ ಕರ್ಕಂಡ್ ಹೋತು.

ಅಲ್ಲಿ ಹೋಗಿ ಕಷ್ಟ–ಸುಖ ಮಾತಾಡ್ದು ಬುಟ್ಟ್ ಈ ಸುಟ್ಟ ಹರ್ಕ್ ಬಾಯಿ ನನ್ನ ಮ್ಯಾಲೆ ಅಜ್ಜಂಗೆ ಚಾಡಿ ಹೇಳ್ಕೆ ಸುರು ಮಾಡ್ತ್. ಈ ಹೈದನ ಸೊಕ್ಕು ನೋಡ್ದ್ಯೊಳ್ರಿಯಾ ಚಾಂಪ ? ಅಲ್ಲ, ನಿಮ್ಮನ ಗೊತ್ತಿಲ್ಲದ ಜನ ಒಳೋ ಹೇಳಿ? ನಿಮ್ಮನ ನೋಡಿಕಂಡ್ ಇಂವ, 'ಅದ್ಯಾವ ಅಜ್ಜರಾ, ಕುದ್ಕ ನಂಗೆ ದೂರಲಿ ಕುದ್ದುಟಲಾ' ಅಂತ ನನ್ನೇ ಕೇಳ್ತಾ ಉಟ್ಟಲ್ಲಾ ! ಇಂವನ ಯಂತ ಮಾಡೊಕು ಹೇಳಿ, ಅಂತ ಅವ್ಕೆ ಸಿಟ್ಟ್ ಬರ್ಸಿ, ಅವರ ಕೈಲಿ ನಂಗೆ ಸಮಾ ಬೊಯ್ಸಿ ತಮಾಸೆ ನೋಡೊಕುಂತೇಳ್ದು ಅವನಗ್ಯಾನ. ಅಂತೂ ಈ ಮಾತ್ ಕೇಳ್ತಿದ್ದಂಗೆ ಅಜ್ಜಂಗೆ ಒಮ್ಮೆಗೆ ಪಿತ್ತ ನೆತ್ತಿಗೇರ್ದಂಗೆ ಆತ್. ಎಲ್ಯೆಡ್ಕನ ಪುಚಿಕ್‌ಂತ ಒಂದು ಬೊದಿಗೆ ಉಗ್ದು ಕಣ್ಣ್ ಕೆಕ್ಕರ್ಸಿಕಂಡ್ ನನ್ನನ ನೋಡ್ಕೆ ಸುರುಮಾಡ್ತ್. ಇದ್ಯಾಕೊ ಕೆಲ್ಸ ಕೆಟ್ಟಂಗಾತ್, ಇನ್ನ್ ನಾನ್ ಬಾಯಿ ಮುಚ್ಚಿಕಂಡಿದ್ದರೆ ಈ ಅಜ್ಜ ನನ್ನ ಗ್ರಾಚಾರ ಬುಡ್ಸಿದೇಂತ ಗ್ಯಾನ ಮಾಡಿ ನಾನೂ ಮಾತಾಡ್ಕೆ ಸುರು ಮಾಡ್ದೆ

ಹಂಗಲ್ಲ ಚಾಂಪ, ನೋಡಿ ನಿಮ್ಮ ಬಗೆಗೆ ಜನ ಮಾತಾಡ್‌ದರ್ನ, ಅವು ಹೇಳುವ ಕತೆಗಳ್ನ ನಾನ್ ಬಾಳ ಕೇಳ್ಯೊಳೆ. ಆದರ್‌ಂದ ನಿಮ್ಮನ ಕಂಡ್ ನಿಮ್ಮೊಟ್ಟಿಗೆ ಮಾತಾಡೊಕೂಂತ ನಾನ್ ಬಾಳ ದಿನಂದ ಗ್ಯಾನಮಾಡಿಕಂಡಿದ್ದೆ. ಇಲ್ಲಿ ಮೊದುವೆಗೆ ನೀವು ಬಂದೇ ಬಂದರೇಂತ ಯಾರೊ ಹೇಳಿದ್ದೊ. ಅದಿಕ್ಕಾಗೇ ನಾನ್ ಇಲ್ಲಿಗೆ ಬಂದದ್. ಈಗ ನಿಮ್ಮನ ಕಂಡ್ ನಂಗೆ ಲಾಟ್ರಿ ಹೊಡ್ದಷ್ಟ್ ಕುಷಿ ಆಗಿಬುಡ್ತ್. ನಿಮ್ಮನ ನೋಡ್ದಂಗೆ ಇವೇ ಇರೊಕುಂತ ಅಂದಾಜಿ ಮಾಡ್ದೆ. ಅಂವ ಈಗ ಸುಮ್ಮಂಗೆ ತಮಾಸಿಗೆ ಹಿಂಗೆಲ್ಲ ಹೇಳ್ತಾ ಉಟ್ಟ್ ಅಷ್ಟೇ. ನೀವೇನೂ ಬ್ಯಾಜಾರ ಮಾಡಿಕಂಬಡಿ ಅಂತ ಒಂದು ಬುರ್ಡೆ ಬುಟ್ಟೆ ನೋಡಿ. ಕೆಂಡಕೆ ಹಾಕ್‌ಕಾಕನ ರೊಟ್ಟಿ ಪೊಕ್ಕಳ ಬಂದದೆ ನೋಡಿ ! ಹಂಗೆ ನನ್ನ ಮಾತ್ ಕೇಳಿ ಅಜ್ಜ ಉಬ್ಬಿ ಹೋತ್. ಸದ್ಯ ಬಚಾವಾದೆಲ್ಲ ಅಂತ ನನ್ನ ಬೆನ್ನ್‌ನ ನಾನೇ ತಟ್ಟಿಕಣುವಂಗೆ ಆತ್.

ಒಂದೇ ಕಡೆ ಕುದ್ದ್ ಕಾಲ್ ಮರಗಟ್ಟಿ ಹೋವುಟು ಮಕ್ಕಳೆ, ಸೊಲ್ಪ ಸುತ್ತಾಡಿಕಂಡ್ ಬಾಪ್ನೊ ಪೋಯಿ ತೇಳಿ ಅಜ್ಜಮೆಲ್ಲೆ ಎದ್ದತ್. ಅವರ ಹಿಂದೆಂದ ನಾವು ಹೊರ್ಟ್ಯೊ. ಹಂಗೇ ಕಾಫಿ ತ್ವಾಟ ದಾಟಿ ಆಚೆ ಬಾಣೆಲಿ ಒಂದ್ ಮಾಯಿನ ಮರದ ಕೆಳ್ಗೆ ಕುದ್ದ್ ಕಂಡೊ. ದಾರಿಲೇ ಅಜ್ಜ ಪಟ್ಯಾಂಗ ಸುರು ಮಾಡಿತ್ತ್. ಮರದ ನೆರಳ್‌ಲಿ ಕುದ್ದ ಮ್ಯಾಲೆ ಇನ್ನ್ ಬುಟ್ಟದ್ಯಾ ?

ಅಜ್ಜಂಗೆ ಮಂತ್ರ-ತಂತ್ರ ಎಲ್ಲ ಗೊತ್ತಿತ್ತ್. ಯಾರಿಗಾದ್‌ರ್ ಸುಖವಿಲ್ಲದಾದರೆ, ಇಲ್ಲೆ ಪೀಡೆನೋ ಸೋಂಕ್ಯಂಡ್ರೆ ಬೂದಿ ಮಂತ್ರಿಸಿ ಕೊಡ್ತಿತ್ತ್. ಹಂಗಾಗಿ ಸುತ್ತ ಮುತ್ತ ಇರುವ ನಾಡ್‌ಗಳ್‌ಲೆಲ್ಲ ಅಜ್ಜನ ಹೆಸ್ರ್ ಬಾಳ ಕೇಳಿಪಟ್ಟಿತ್ತ್.

ಸ್ವಾಂಪಜ್ಜಂಗೆ ಮಂತ್ರ–ತಂತ್ರ ಮಾಡಿಯೇ ಬದ್ಕೊಕು ತೇಳುವಂತದೇನೂ ಇಲ್ಲೆ ಅವುಕೆ. ಬೇಕಾದಷ್ಟ್ ಆಸ್ತಿ–ಪಾಸ್ತಿ ಎಲ್ಲ ಉಟ್ಟ್. ಅಂತೂ ನಾಕ್ ಜನಿಗೆ ಒಳ್ಳೆದಾಗುವಂತ ಕೆಲ್ಸ ಮಾಡೊಕುಂತೇಳಿ ಈ ಕೆಲ್ಸನೂ ಮಾಡ್ತಿದ್ದೊ ಅಷ್ಟೇ. ಹಂಗೇ ಅವು ದುಡ್ಡುಗೆ ಆಸೆ ಮಾಡಿಕಂಡೇನೂ ಈ ಕೆಲ್ಸ ಮಾಡ್ತಿತ್ಲೆ. ಬಂದವರ ಹತ್ರ

ದುಡ್ಡ್‌ನೂ ಕೇಳ್ತಿತ್ಲೆ, ಆದ್ರೆ ಅವು ಕೊಟ್ಟ್‌ರೆ ಬ್ಯಾಡಂತನೂ ಹೇಳ್ತಿತ್ಲೆ. ಅದೂ ಈಗೇ ನಾವುಟುಂತೇಳ್ರಿ ಜನ ಅವರ ಹತ್ರ ಬಾದೇ ಕಮ್ಮಿ ಮಾಡಿಬುಟ್ಟೊಳೊ ಗಡ. ಇದೇ ಅವುಕೆ ದೊಡ್ಡ ವ್ಯಸನ ಆಗುಟು.–'ಈ ನಮಕ್ಕ ಅಂತೂ ಹಾಂಕರಲಿ ಸತ್ತವೆ. ಅವುಕೆಲ್ಲ ಯಾರ್ ಹೇಳೊವು, ಸೊಲ್ಪ ಉಸಾರಿಲ್ಲದಾಕಾಕನ ಮನೇಲಿ ಅವ್ವ, ಅಪ್ಪ—ಪೋಯವ್ವ ಮಂತ್ರ ಹಾಕ್ಸಿ, ನೂಲ್ ಕಟ್ಟಿಕಂಡ್ ಬಾವನೊಂತೇಳ್ರಿ, ನಿಮ್ಮ ಸುಟ್ಟ ಮಂತ್ರನೋ, ನೀವೋ. ಅದೆಲ್ಲ ನಿಮಿಗೇ ಸರಿ. ನಾನ್ ಡಾಕ್ಟ್ರತ್ರ ಹೋಗಿ ಮೊದ್ದು ತಕಬನ್ನೆತ ಸೀದ ಹೋಬುಟ್ಟವೆ. ಆ ಡಾಕ್ಟ್ರ್‌ಗಳ್ಗೆ ಅಷ್ಟೇ ಬೇಕಾದ್. ಫೀಸ್, ನೀರ್‌ಮೊದ್ದು, ಅದ್ ಇದ್‌ಂತೇಳಿಕಂಡ್ ಇವರ ಜೇಬುಲಿರ್ದರ್ನ ಎಲ್ಲಾ ಕಾಲಿ ಮಾಡುವೆ. ಅಂತೂ ಅದರ್‌ಂದ ಏನೂ ಪ್ರಯೋಜನ ಇಲ್ಲೆ. ಎಷ್ಟಾದರೂ ಕಡೆಗೆ ಅವು ನನ್ನತ್ರ ಬಂದೇ ಬರೊಕು ನೋಡಿ. ನಾನ್ ಬಾರೀ ಕಲ್ತ್‌ಬುಟ್ಟೊಳಿತ ಹಾಂಕರ ತೋರ್ಸಿಕೆ ಹೋದರೆ ಕಡೆಗೆ ಹಿಂಗೇ ಗುಂಡಿಗೆ ಬಿದ್ದವೆ ನೋಡಿಂತ ಹೇಳ್ದೊ.

ಸ್ವಾಂಪಜ್ಜನ ಮಂತ್ರತೇಳ್ರಿ ಮತ್ತೆ ಸುಮ್ಮಂಗೆ ತಮಾಷಿ ಮಾಡಿ ನೆಗಾಡುವಂತದೇನೂ ಅಲ್ಲ. ಒಮ್ಮೆ ಮಂತ್ರ ಹಾಕಿ ಅವು ನೂಲು ಕಟ್ಟಿಬುಟ್ಟೊಂತೇಳ್ರಿ ಮತ್ತೆ ಎಂತ ಪೀಡೆ ಆದರೂ ಹತ್ರ ಅಡ್ಗುವಂಗಿಲ್ಲ. ಅವರ ಕೈಗುಣ ಇಷ್ಟ್‌ಲಾಯಿಕ ಇದ್ದರೂ ಈಗೀಗ ಅವರ ಅದೃಷ್ಟನೇ ಸೊಲ್ಪ ತೋಪರೆ ಆದಂಗೆ ಆವುಟು. ಅವರ ಮಕ್ಕಳೇ ಅವರ್ನ ಈಗ ಕಡೆಗಣ್ಸಿಕೆ ಸುರು ಮಾಡ್ಯೊಳೊಗಡ. ಒಂದಿನ ಅವರ ದೊಡ್ಡಸೊಸೆಗೆ ಹೊತಾರೆ ಎದ್ದಂಗೇ ಹೊಟ್ಟೆಬ್ಯಾನೆ ಸುರಾವುಟು. ಬ್ಯಾನೆಂತೇಳ್ರಿ ಮತ್ತೆ ಅದರ್ನ ಹೇಳ್ಕೆ ಸಾಧ್ಯಯಿಲ್ಲೆ. ನೆಲದ ಮ್ಯಾಲೆ ಬಿದ್ದ್ ಒಂದೆಸಮ ಒದ್ದಾಡ್ಕೆ ಸುರುಮಾಡಿಟು. ಅವಳ ಅವಸ್ಥೆನ ನೋಡ್‌ಕಾಕನ ಇದ್ ರಣಪೀಡೆದ್ ಚೇಷ್ಟೆ ಅಲ್ಲದೆ ಮತ್ತೆಂತದೂ ಅಲ್ಲಂತೇಳ್ದು ಅಜ್ಜಂಗೆ ಲಾಯಿಕ ಗೊತ್ತಾವುಟು. ಇದ್‌ಕೆ ಕಲ್ಸಿನೆ ಈಗ ಬುದ್ಧಿಂತೇಳಿ ಅಜ್ಜ ಮಂತ್ರ ಹಾಕಿಕೆ ಎಲ್ಲ ಜೋಡ್ಸಿಕಂಡಿರ್ಕಾಕನ ಮಜ ಅಲ್ಲಿಗೆ ಬಂದುಟು. ಆಗ ಸೊಲ್ಪ ನಿಲ್ಲ್‌ನೆ ಹೊಟ್ಟೆವೊಳಗೆ ರಣಪೀಡೆ ಹೊಕ್ಕಿಬುಟ್ಟುಟು, ಅರ ಬಾಯಿಗೆ ಮೊಣ್ಣಾಕ್ಸಿನೆ ಈಗ ನೋಡುಂತ ಇವು ಹೇಳ್ಯಾಕನ 'ನಿನ್ನ ಮಂತ್ರನ ತಕಂಡೋಗಿ ಒಲೆಗೆಹಾಕ್.ನಿನ್ನ ಮಾತ್‌ನ ಕಟ್ಟಿಕಂಡ್ ನಾನ್ ಹೋದರೆ ಅವಳ್ನ ಕಳ್ಕಣ್ಕೆ ಆದುಂ' ತೇಳಿ ಬ್ಯಾಡ ಬ್ಯಾಡಂತ ಹೇಳ್ತಾಯಿದ್ರೂ ಕಿವಿಗೆ ಹಾಕಣದೆ ಸೀದ ಆಸ್ಪತ್ರೆಗೆ ತಕಂಡ್ ಹೋವುಟು. ಅಲ್ಲಿ ಡಕಟ್ರ್ ಅವಳ ಹೊಟ್ಟೆಲಿ ಗೆಂಡೆ ಬೆಳ್ದ್‌ಬುಟ್ಟುಟು ಅದರ್ನ ಈಗಳೇ ಕೊಯ್ದ್ ತೆಗ್ಯೆದಿದ್ದರೆ ಅವಳು ಬದ್ಕುದುಲೆಂತೇಳಿ ಅಂದೇ ಹೊಟ್ಟೆನ ಕೊಯ್ದ್‌ಬುಟ್ಟೊಳೊ, ಸುಮಾರ್ ಒಂದ್ತಿಂಗಮಟ್ಟ ಆಸ್ಪತ್ರೆಲಿ ಇದ್ದ್ ಬಾತ್. ಈ ಮಕ್ಕ ಅಂತೂ ಹೇಳ್ದ ಮಾತ್ ಕೇಳುದ್ಲೆ, ತಿಂದದಲ್ಲ, ಉಂಡದಲ್ಲ ಅನಾಶ್ಯಾಗಿ ದುಡ್ಡ್ ದಂಡ. ಹೆಂಗಾದ್ರ್ ಸಾಯಲಿ ಅತ್ತ. ಸಣ್ಣ ಮಕ್ಕ ಆದಗೆ ಹೊಡ್ಡಾದ್ರ್ ಬುದ್ಧಿ ಹೇಳಕ್. ಇವುಕೆಲ್ಲ ಯಾರ್ ಹೇಳೊವುಂತ ಅಜ್ಜ ಪರ್ದಾಡ್ಕೆ ಸುರುಮಾಡ್ದೊ.

ಇನ್ನೊಂದು ಸಂಗತಿಯೇನ್‌ಂತೇಳ್ರಿ ಈ ಕೊಲೆ ಚೇಷ್ಟೆನೋ, ಪೀಡೆ ಸೋಂಕುದೋ ಇಂತದೇನಾದ್ರ್ ಇದ್ದರೆ ಅದ್‌ಕೆ ಏನಾದ್ರ್ ಅಡ್ಕ ಮಾಡಕ್. ಆದರೆ ಈ ಪೆಟ್ಟ್ ಸಿಕ್ಕುದುಂತ ಹೇಳುವೆ ಅಲ್ಲ, ಅದರ್ನ ಮಾತ್ರ ಯಾರ ಕೈಂದೂ ತಡ್ಯಕೆ ಸಾದ್ಯಯಿಲ್ಲೆ. ಈತರ ಆದವು ಕೆಲವು ಜನರ್‌ಗೆ ಅಜ್ಜ ಮಂತ್ರ ಹಾಕಿರೂ ಸಹ ಕೆಲವು ಸಲ ಏನೂ ಪ್ರಯೋಜನ ಆತ್‌ಲೆ. ಇದ್‌ಕೆಲ್ಲ ಅವರ್ನ ದೂರಿಕೆ ಆದುಲೆ ಬುಡಿ. ಮನ್ಯೊಂದು ಕತೆ ಹಂಗೆ ಆವುಟು. ಕೆಳ್ಗಿಮನೆ ಹೈದಂಗೊಬ್ಬಂಗೆ ಎರಡ್ಮೂರು ದಿನಂದ ಸೊಲ್ಪ ಜೊರ ಇತ್ತ್‌ಗಡ. ಅವು ಎಂತದೋ ಕಷಾಯ ಮಾಡಿ ಕುಡ್‌ಸ್ಯೊಳೊ. ಇನ್ನ್ ಏನ್ ಆಕಿಲ್ಲೆಂತೇಳಿ ಸೊಲ್ಪ ಉದಾಸೀನ ಮಾಡ್ಯೊಳೊ. ಕಡೆಗೆ ಇದ್ದಕ್ಕಿದ್ದಂಗೆ ಹೈದಂಗೆ ಜೋರಾಗಿಬುಟ್ಟು ರಕ್ತ ಕಾರಿಕೆ ಸುರುಮಾಡಿಟ್ಟು. ಅವು ಅಂವನ ಎತ್ತಿಕಂಡ್ ಅಜ್ಜನತ್ರ ಓಡಿಬಂದೊಳೊ. ಅವನ ಪಾಡ್ ನೋಡ್ಯಾಕನೇ ಇದ್ಯಾಕೋ ಕೆಲ್ಸ ಕೆಟ್ಟೋತ್‌ಂತೇಳ್ದು ಅಜ್ಜಂಗೆ ಗೊತ್ತಾವುಟು. ಅಂತೂ ಇವರ್ನೇ ನಂಬಿಕಂಡ್ ಬಂದವರ್ನ ಹಂಗೇ ಹಿಂದಕೆ ಕಳ್ಸುದು ಹೆಂಗೆ ಹೇಳಿ? ಅವು ಏನ್ ತಿಳ್ಕಂಬಕಿಲ್ಲೆ? ನನ್ನ ಕೈಲಾದಷ್ಟ ಮಾಡ್ನೊಂತೇಳಿ ಇವು ಮಾಡುಂತದೆಲ್ಲ ಮಾಡ್ಯೊಳೊ. ಆಗಣಿಗೆ ಸೊಲ್ಪ ಕಮ್ಮಿ ಆತ್ ಮತ್ತೆ ಮನೆಗೋದ ಮ್ಯಾಲೆ ಪುನಃ ಕಾರಿಕೆ ಸುರುಮಾಡಿ ಸೊಲ್ಪಹೊತ್ತ್‌ಲೆ ತೀರಿಹೋತು. ಹೊತಾರೆ ಹಣ್ಣಾಬೊಳಿ ಬುಡ್ಯಾಕನ ಅವರ ಮನೆವೆಲ್ಲ ಇವರ ಮನೆಬಾಗ್ಲ್‌ಗೆ ಬಂದ್ ತಾರಮಾರ ಬೊಯ್ಯ್ ಸುರುಮಾಡ್ಯೊಳೊ. 'ನಿನ್ನ ನಂಬಿಕಂಡ್ ಬಂದ್ ನಾವು ಹಾಳಾದೊ. ನಿನ್ನತ್ರ ಬರದೆ ನಾವು ಸೀದ ಆಸ್ಪತ್ರೆಗೆ ಹೋಗಿದ್ದರೆ ಕೂಸ್‌ನ ಉಳ್ಸಿಕಣಕಾಗಿತ್ತ್. ನಿನ್ನ ಕೈಲಿ ಹರಿಯೊದುಲೆಂತ ಆದ ಮ್ಯಾಲೆ ನಿಂಗೆ ಹೇಳಿಕೆ ಏನ್ ಕೇಡಾಗಿತ್ತ್? ನೀನ್ ಅಂತವ-ಇಂತಂವ, ನಿನ್ನ ಹಂಗೆ ಮಾಡುವೆ ಹಿಂಗೆ ಮಾಡುವೆಂತೇಳಿ ಬಾಯಿಗೆ ಬಂದಂಗೆ ಬೊಯ್ದೊಳೊ.

ತಪ್ಪು ಅವರ್ದೇ ಮಕ್ಯಂಡಿಡ್ ಅಜ್ಜನ ಬೊಯ್ಯೊದರ್ಲಿ ಅರ್ಥ ಉಟ್ಟಾ ಹೇಳಿ? ಅವು ಬ್ಯಾಡದ ಅನಾಚಾರ ಎಲ್ಲಾ ಮಾಡ್ದರ್‌ಂದ ಅದರಫಲನ ಅನುಭವಿಸುವೆ ಅಷ್ಟೆ! ಮನೆವೆಲ್ಲ ಜಗಳ–ಜೆಟ್ಟೆ ಮಾಡಿಕಂಡ್, ಒಬ್ಬರ್ನ ಕಂಡ್ರೆ ಮತ್ತೊಬ್ಬಂಗೆ ಆದುಲೆ, ಮಾತ್ ಕತೆ ಇಲ್ಲದೆ ಮನೆ ದೇವರು,

ದೆಯ್ಯನ ಎಲ್ಲ ಮರ್ಸ್ತ್ ಕುದ್ದೊಳೊ. ಸಾಂಪಜ್ಜನೇ ಎಷ್ಟೋ ಸಲ ಅವರ್ನ ಕರ್ಸ್ದ್ ಬುದ್ಧಿ ಹೇಳ್ಯೊಳೊ.-ನೋಡಿ ನೀವು ಹಿಂಗೆಲ್ಲ ಮಾಡ್ದು ಸರಿಯಿಲ್ಲೆ. ನೀವು ಕಚ್ಚಾಡಿಕಂಡ್ ಹೆಂಗಾದ್ರ್ ಸಾಯುನಿ. ಆದರೆ ದೇವರು ದೆಯ್ಯನೆಲ್ಲ ಮರ್ಸ್ತ್ ಕೂರುದರ್‌ಂದ ನಿಮಿಗೆ ಖಂಡಿತಾ ಒಳ್ಳೆದಾದುಲೆ. ನಿಮ್ಮ ನಿಮ್ಮೊಳಗೆ ತಪ್ಪು ನೆಪ್ಪು ಎಷ್ಟೋ ಬಾದು. ಆದರೆ ಅದರ್ನೆಲ್ಲ ಸರಿಪಡ್ಸಿಕಂಬೊದು ಬುಟ್ಟ್ ಹಿಂಗೇ ಇದ್ದರೆ ಕಡೆಗೆ ಇಡೀ ಕುಟುಂಬಕೇ ತೊಂದರೆ ಉಟ್ಟು. ಆದರ್‌ಂದ ನೀವು ಮನೆವೆಲ್ಲ ಸೇರಿ ಮಾತಾಡಿ ಏನಾದ್ರ್ ಒಂದ್ ತೀರ್ಮಾನ ತಕಂಡ್. ಈ ಎಲ್ಲ ಹಿಂದನ ಪದ್ಧತಿಗಳ್‌ನ ಸರಿಯಾಗಿ ನಡ್ಸಿಕಂಡ್ ಹೋದು ಒಳ್ಳೆದ್‌ಂತ ಸುಮಾರ್ ಸಲ ಹೇಳ್ಯೊಳೊ. ಹೇಳ್ವಾಕನ ಒಮ್ಮೆ ಆತ್, ಹಂಗೇ ಮಾಡುವೆಂ ತೇಳಿ ಒಪ್ಪಿಕಂಡ್ ಹೋಗಿ ಮತ್ತೆ ನಂಗ್ಯಾಕೆ ಬೇಕು, ಅಂವ ಮಾಡ್ಲಿ, ಇಂವ ಮಾಡ್ಲಿಂತ ಸುಮ್ಮಂಗೆ ಕುದ್ದೊಳೊ. ಅದರ ಫಲನೇ ಈಗ ಕಾಂಬಕೆ ಸುರಾಗುಟು. ಇದರ್ನೆಲ್ಲ ಗ್ಯಾನಮಾಡದೆ ಹಿಂಗೆ ಬಂದ್ ಹಾರ್‍ಯಾಡುವ ಇವುಕೆ ಏನ್ ಹೇಳೊಕು ಹೇಳಿ ?

ಪಾಪ, ಸ್ವಾಂಪಜ್ಜಂಗಂತೂ ಇದರ್ನೆಲ್ಲ ನೋಡಿ ಬಾಳ ಬ್ಯಾಜರ ಆಗುಟು. ಈ ವಯಸ್ಸಪಟ್ಟ ಕಾಲಲಿ ಮಕ್ಕಳ ಕೈಂದ ಬೊಯ್ಸಿಕಂಬೊಂಗೆ ಆತಲೆ. ಇವುಕೆ ಉಪಕಾರ ಮಾಡ್ದೂ ಸಾಕ್, ಇವರ ಮಾತ್ ಕೇಳ್ದೂ ಸಾಕ್. ನಂಗೆ ಈಗ ಯಾವ್ದೂ ಬ್ಯಾಡಾಂತಾವುಟು ಅಂತೇಳಿ ಬ್ಯಾಜರಲಿ ತಲೆಮ್ಯಾಲೆ ಕೈಹೊತ್ತ್ ಕಂಡ್ ಉಸ್ಸ್...ಅಂತ ದೊಡ್ಡದಾಗಿ ಉಸುರ್‌ಬುಟ್ಟೊ. ಇದ್ ಕೆಲ್ಲ ನೀವು ಬ್ಯಾಜರ ಮಾಡಿಕಂಡ್ರೆ ಹೆಂಗೆ ಚಾಂಪ ? ಏನೋ ಹೈದ ಸತ್ತ ಬ್ಯಾಜರಲಿ ಅವು ನಾಕ್ ಮಾತ್ ಹೇಳಿರುವೊ, ಅವು ಮಾಡ್ದ್ ತಪ್ಪುಂತೇಳ್ದು ಅವುಕೆ ಗೊತ್ತಿಲ್ದೆ ಉಟ್ಟ? ಇದರ್ನೆಲ್ಲ ಮನ್‌ಸ್‌ಗೆ ತಕಂಡ್ ನೀವು ಬ್ಯಾಜರ ಮಾಡಿಕಂಬಡಿಂತ ನಾವು ಸಮ್ಧಾನ ಮಾಡ್ಡೊ.

ಅಷ್ಟೊತ್ತಿಗೆ ಹೊಟ್ಟೆ ಚುರುಗುಟ್ಟಕೆ ಸುರಾತ್. ವಾಚಿ ನೋಡ್ವಾಕನ ಅಲಗೊತ್ತು ! ಗಂಟೆ ಮೂರುವರೆ ಆಗುಟು. ಸ್ವಾಂಪಜ್ಜನ ಕತೆ ಕೇಳಿಕಂಡ್ ಕುದ್ದ ನಮಿಗೆ ಹೊತ್ತ್‌ಹೋದೇ ಗೊತ್ತಾತ್ಲೆ. ಇನ್ನ್ ಮೊದುವೆ ಮನೆಗೆ ಹೋಗಿದ್ದರೆ ಅಷ್ಟೊತ್ತಿಗೆ ಅವರ್ದೆಲ್ಲ ಊಟ ಆಗಿದ್ದರ್, ಅಂತೂ ಪಾತ್ರೆ ಅಡಿಲಿ ಪಳ್ದದ್ ಏನಾರ್ ಸಿಕ್ಕಿರ್‌ದು, ಆದರೆ ಇದೆಲ್ಲ ಕೇಳಿ ನಮಿಗೂ ಬಾಳ ಬ್ಯಾಜರ ಆಗಿತ್ತ್. ಅಲ್ಲಿಗೆ ಹೋಗಿದ್ದರೂ ಊಟ ಸೇರಿ ಕಿತ್ಲೆ, ಆದರ್‌ಂದ ತಿರ್ಗಿ ಮೊದುವೆಮನೆಗೆ ಹೋಗದೆ ಸೀದಾ ಇತ್ತಳೇ ಹೊರ್ಟ್‌ಬಂದೊ. ○

ಜನ್ನಹೋರಿನೂ ಜಾಹ್ನವಿ ಕಡ್ಸ್‌ನೂ

ರಾಜ ಚೆರಿಯಮನೆ, ಜೋಡುಪಾಲ, ಮಡಿಕೇರಿ.

ವಿದ್ಯಾಭ್ಯಾಸದ ಒಂದು ಘಟ್ಟ ಮುಗಿಸಿ ಎಲ್ಲಾ ಜವಾಬ್ದಾರಿಗಳ ತಲೆಮೇಲೆ ಎಳ್ಕಂಡ್ ಮನೆಲೇ ಇದ್ದ ಕಾಲ. ಆಗ ನಮ್ಮ ನೇಲಿ ಐದಾರ್ ನಡೆ ದನಗಿದ್ದೊ. ಅದರ್ಲಿ ಜನ್ನಹೋರಿನೂ, ಜಾಹ್ನವಿ ಕಡ್ಸ್‌ನೂ ಸುಮಾರಾಗಿ ಒಂದೇ ಪ್ರಾಯದ, ಒಂದೇ ಎತ್ತರದ, ಒಂದೇ ಬಣ್ಣದವಾಗಿದ್ದೊ. ಹಂಗಿರ್ವಾಕನ ಜನ್ನ ಹೋರಿ ನಾಕ್‌ಹಲ್ಲ್‌ಹಾಕಿತ್. ಅದರ ಮೇಲೆ ಇದ್ ಕೂಡಿಕೆ ಹಟ್ಟಿಗೆ ಬಂದದೆತ ? ನಾನ್ ಕುಂದ್‌ಗೆ ಅದರ ಹೊಡ್ಕಬಾಕೆತ ಹೋದರೆ ನನ್ನ ನೆರ್ಳ್‌ಆಂಜ್‌ಕಾಕನೆ ಅದ್ ಪರಾರಿ. ಅದ್ಕೆ ಸರಿಯಾಗಿ ಈ ಜಾಹ್ನವಿ ಕಡ್ಸ್ ಪ್ರಾಯಲಿ ಅದ್ರಿಗಿ ಬರುವ ಸಮಯ. ನಂಗೋ ಬಿಸಿರಕ್ತದ ಪಿತ್ತ ನೆತ್ತಿಗೇರುವ ವಯಸ್ಸ್. ಈ ದನಗಳ ಬಗ್ಗಿಸಿಕಾಗದೆ ಸಿಟ್ಟ್‌ಲಿ ಕಂಡಕಂಡಲೆಲ್ಲ ಲಾರಿ ಚಾರ್ಜ್ ಮಾಡ್‌ದೊಂದೆ ನನ್ನ ಕಲ್ಸ. ಅದ್ಕ ಈ ಕಲಿಕಾಲದ ದನಗ ಸೊಪ್ಪುಹಾಕುವೆನ ? ದಿನಾ ಕೊಟ್ಟೆಗೆಗೆ ಬರುವ ದನಗ ವಾರಕ್ಕೊಮ್ಮೆ ಬಾಕೆ ಸುರುಮಾಡ್ದೊ. ಹಂಗೆ ದಿನ ಹದಿನೈದ್ ಕಳ್ದ್ ಶಿಂಗಾದಾರೂ ಬಾತ್ಲೆ ತೇಳ್‌ಕಾಕನ ಪೊಪ್ಪ ಹೇಳ್ದೊ, "ರಾಜ, ಎಲ್ಲಾ ಮಾಡ್ದು ಆ ಜನ್ನ ಹೋರಿ. ಅದರ ಬೀಜ ನೀರ್ ಮಾಡ್ರೆ ದನಗೆಲ್ಲ ಸರಿಯಾಗಿ ಹಟ್ಟಿಗೆ ಬಂದವೆತ." ನೆಂತ ನಾನ್ ಗ್ಯಾನಮಾಡಿ ಸಂಪಾಜೆ ವೆಟ್ನರಿ ಆಸ್ಪತ್ರೆಗೆ ದನ ಡಾಕ್ಟರ್‌ನ ಕರ್ಕಬಾಕೆ ಹೋದೆ. ಬಾಗ್ಲಲೇ ಪಿವುನ್ ನಿತ್ತಿತ್ತ್. ಡಾಕ್ಟರ್ ಒಳಗೆ ಒಳೋನತ ಕೇಳ್‌ಕಾಕನ ಅಂವ ಹೇಳ್ತ್. ಡಾಕ್ಟರ್ ಈ ಆಸ್ಪತ್ರೆಲಿ ಇಲ್ಲೆ, ಅವರ ಕಾಂಬೊಕುತಾದರೆ ಮಡಿಕೇರಿಗೆ ಹೋಕು, ಒಳಗೆ ಕಂಪೋಂಡ್ರ್ ಒಳೋ ಅವರತ್ರ ಮಾತಾಡಿತ. ನಾನ್ ಸೀದಾ ಒಳಗೋದೆ. ಖುರ್ಚಿಲಿ ಒಂದು ಸಣ್ಣ ವಯಸ್ಸ್‌ನ ಗೂಡೆ ಗತ್ತ್‌ಲೇ ಕುದ್ದಿತ್. ಮತ್ತೆ ಅವುಳೆ ಕೇಳ್ತ್ ಎಂತಾಕುತ ? ನಾನ್ ಜನ್ನ ಹೋರಿನ ಬೀ. ಬೀ. ಬೀ. ತ್ತೇಳಿ ಜಾಹ್ನವಿ ಕಡ್ಸ್‌ಗೆ ಹೊಟ್ಟೆಲಿ ಹುಳ ತುಂಬಿಟು. ಮೊದ್ದು ಬೇಕುತ್ತೆ'ಳ್ದೆ. ಅವುಳು ಮೊದ್ದು ತಾಕೆತ ಒಳಗೆ ಹೋಕಾಕನ ನಾನ್ ಬೇರೆ ದಾರಿಕಾಣದೆ ಸದ್ದಿಲ್ಲದೆ ಜಾಗ ಖಾಲಿಮಾಡ್ದೆ !

ಅಲ್ಲಿಂದ ಲಾರಿಹತ್ತಿ ಸೀದಾ ಜೋಡುಪಾಲಕ್ಕೆ ಬಂದ್ ಕುಮ್ಮಣನ ಹತ್ರ ವಿಷಯ ಹೇಳ್ದೆ. ಅಂವ ಹೇಳ್ತ್, ಅದ್ಕೇಕೆ ಅಷ್ಟೆಲ್ಲ ಕಷ್ಟ ? ನಾನ್ ಕಳಿಕೋಲ್‌ಲಿ ಬಿತ್ತ್‌ನ ಸೀರ್ ಮಾಡಿ

ಕೊಟ್ಟನೆ. ನೀನ್ ಹೋರಿನ ಹಿಡ್ಕಂಬಕೆ ನಾಕ್ ಜನನ ಸೇರ್ಸಿಕತ ಹೇಳ್ತ್. ನಾನ್ ಖುಷಿಲೇ ಒಪ್ಪಿಕಂಡ್ ಬಂದೆ. ಮಾರ್ನೆದಿನ ಬೊಳಿ ಬುಡ್‌ಕಾಕನೆ ಕುಮ್ಮಣ್ಣ ಕೈಲಿ ಕಳಿಕೋಲ್ ಹಿಡ್ಕಂಡ್‌ಬಾತ್. ಸ್ವಲ್ಪ ಹೊತ್ತ್‌ಲೆ ಹೋರಿನ ಹಿಡ್ಕಂಬಕ್ಕೆತ ಹೇಳಿದ್ದ ಗಪ್ಪು, ಭಾಷ, ಕೃಷ್ಣ, ಪೊನ್ನ ಎಲ್ಲವೂ ಬಂದೋ. ಮಿಲ್ಟ್ರಿಂದ ರಜಲಿ ಬಂದಿದ್ದ ನನ್ನ ತಮ್ಮ ಮಣಿನೂ ಇತ್ತ್. ಒಟ್ಟಿಗೆ ನಾನ್ ಸೇರಿಕಂಡರೆ ಮತ್ತೇಷ್ಟ ಜನಬೇಕು ? ಹಂಗೆ ಒಂದೊಂದು ಗ್ಲಾಸ್ ಕಾಫಿ ಕುಡ್ಡ್ ಕೊಟ್ಟಿಗೆಗೆ ಹೋಕಾಕನ ಗುಂಡ ನಾಯಿ ಕಟ್ಟಿ ಹಾಕಿದಲ್ಲಿಂದಲೇ ಗುರ್ತೇಳ್ತ್. ಎಷ್ಟಾಟ ದರೂ ಅದರ್ನ ದಾಟಿಯೇ ಹಟ್ಟಿಗೆ ಹೋಕು. ಮುಂದೆ ಕುಮ್ಮಣ್ಣ ಇತ್ತ್. ಹಿಂದೆ ನಾನ್ ಇದ್ದೆ. ಕುಮ್ಮಣ್ಣ ಹೆದ್ರಿಕಂಡ್ ಮುಂದೆ ಹೋದಂವ ಒಮ್ಮೆಗೆ ಹಿಂದೆ ತಿರ್ಗಿಹೇಳ್ತ್. ರಾಜ ಡಿಂಗ ನಾಯಿನ ಮೂಗುಲಿ ಪಾವುಳಿಗ ಸೇರಿಕಂಡೊಳೊ, ಅದರ ತೆಗ್ದ್ ಬುಡನತ. ನಾನ್ ಆತ್ ತೇಳ್ದೆ. ಮಿಲ್ಟ್ರಿ ತಮ್ಮ ಮಣಿ ಅದರ ಮುಸುಡಿನ ಗಟ್ಟಿ ಹಿಡ್ಕಣ್ತ್. ಕುಮ್ಮಣ್ಣ ಕೈಲಿ ಬೂದಿ ಮೆತ್ತಿ ಕಂಡ್ ಪಾವುಳಿನ ಎಳೆಯಕೆ ನೋಡ್ತ್. ಆಗ ಡಿಂಗನಾಯಿ ತಲೆನ ಅತ್ತಾ ಇತ್ತಾ ಅಲ್ಲಾಡ್ಸಿತ್. ಈಗ ಮಣಿ ಇದ್ದ ಬದ್ದ ಶಕ್ತಿನ್ನೆಲ್ಲ ಕೊಟ್ಟ್ ಜೋರಾಗಿ ಅಮ್ಕಿ ಹಿಡ್ಕಂಣ್ತ್. ಅರ್ಧ ಗಂಟೆ ಪೇಚಾಡಿ ಕುಮ್ಮಣ್ಣ ಮೂರ್ನಾಕ್ ಪಾವುಳಿನ ಎಳ್ದ್ ಇನ್ನ್ ಇಲ್ಲೆತ ಕಂಡವೆರ, ನಾಯಿನ ಬುಡತ್ತೇಳ್ತ್. ಮಣಿ ನಾಯಿನ ಬುಟ್ಟತ್ ಡಿಂಗನಾಯಿ ಒಂದು ಸಲ ಸ್ವಲ್ಪ ಉಚ್ಚೆ ಹೊಯ್ದ್ ಕಾಲ್‌ನ ಉದ್ದಕ್ಕೆ ನೀಂಡಿ ಕಣ್ಣ್‌ನ ಆಕಾಶಕ್ಕೆ ಮಾಡಿ ಮಣ್ಣ್‌ತೀಂತ್.

ನಾನೂ ಕುಮ್ಮಣ್ಣನೂ ನಾಯಿನ ಎಳ್ಕೊಂಡೋಗಿ ಹಳೆ ಬಾಳಿಗುಂಡಿಗೆ ಹಾಕಿ ಮಣ್ಣ್ ಕಡ್ದ್ ಮುಚ್ಚಿ ಬಾಕಾಕನ. ಈ ಮ್ಯಾನ್ ಗಪ್ಪು ಮತ್ತೆ ಅವನ ಗ್ಯಾಂಗ್‌ನವು ಸೇರಿಕಂಡ್ ಹಗ್ಗ ಹಾಕಿ ಹೋರಿನ ನೆಲಕ್ಕೆ ಬೀಳ್ಸಿ ಹಿಡ್ಕಂಡಿದ್ದೊ. ಕುಮ್ಮಣ್ಣ ಕಳಿಕೋಲ್ ತಕಂಡ್‌ಹೋರಿನ ಬೀಜನ ಬಗ್ಗಿ ನೋಡ್ತ್.ಒಟ್ಟಿಗೆ ನಾನು ಇದ್ದೆ.ನೋಡ್ರೆ ಬೀಜ ಎಲ್ಲಿ ಉಟ್ಟು ? ಈ ಬಡ್ಡಿ ಮಕ್ಕ ಜನ್ನತ ಗ್ಯಾನಮಾಡಿ ಜಾಹ್ನವಿ ಕಡ್ಸ್‌ನ ನೆಲಕ್ಕೆ ಬೀಳ್ಸಿ ಹಿಡ್ಕಂಡ್ ರೆಡಿಯಾಗಿದ್ದೊ ! ಕುಮ್ಮಣ್ಣ ನಿಮಿಗ್ಯಾರಿಗೂ ಸರಿ ಸೊಯೇನೇ ಇಲ್ಲೆತೇಳಿ ತಾರಾ ಮಾರ ಬಯ್ತ್.

ಅಲ್ಲಿಂದ ಜಾಹ್ನವಿ ಕಡ್ಸ್‌ನ ಬುಟ್ಟ್ ಅದರೊಟ್ಟಿಗೆನೆ ಇದ್ದ ಜನ್ನ ಹೋರಿನ ಅಡ್ಡ ಬೀಳ್ಸಿದೊ. ನಮ್ಮಂತ ನರಪೆತ್ಲ್‌ಗ ಹಿಡ್ಕಂಡ್ರೆ ಆದ್‌ಕೇಳ್ದೆನ ? ಅಂತೂ ಇಂತೂ ಹೆಂಗಾರ್ ಅಡಿಗೆ ಬೀಳ್ಸಿ ಗಟ್ಟಿಯಾಗಿ ಹಿಡ್ಕಂಡೋ. ಈ ಗಪ್ಪುಮಾರಾಯ ಕಾಲ್ ಹಿಡ್ಕಂಡಿತ್ತ್. ಕುಮ್ಮಣ್ಣ ಕಳಿ ಹಾಕಿ ಹೋರಿನ ಬೇಜ ಒತ್ತಿ ಒತ್ತಿ ನೀರ್‌ಮಾಡ್‌ಕಾಕನ ಹೋರಿ ಬೇನೆ ತಡಿಯ ಕಾಗದೆ ಒಂದು ಸಲ ಇದ್ದ ತಾಕತ್‌ನೆಲ್ಲ ಕೊಟ್ಟ್ ಜಾಡ್ಸಿ ಒದ ತ್. ಗಪ್ಪು ಆರ್‌ಮಾರಾಚೆ ರಟ್ಟಿಬೀತ್. ಕಮ್ಮಣ್ಣ ಅಯ್ಯೋ, ಅಮ್ಮ ಸತ್ತೇ ತೇಳಿ ಬೊಬ್ಬೆಹಾಕಿತ್. ಆಗ ಅಂವ ಗಪ್ಪುನವುಕೆ ಹೇಳಿದ್ದ ಸೋಯೋ ಈಗ ಅವಂಗೇ ಇತ್ತ್‌ಲೆ ! ನಾನ್ ಸೀದಾ ನಂಗಾರ್‌ಗೆ ಹೋಗಿ ಜಯಂತನಹತ್ರ ವಿಷಯ ಹೇಳಿ, ಅವನ ಕಾರ್‌ತಗಂಡ್ ಕಮ್ಮಣ್ಣನ ಅದರ್ಲಿ ಕೂರ್ಸಿ ಆಸ್ಪತ್ರೆಗೆ ತಕಂಡ್ ಹೋದೆ. ಡಾಕ್ಟರ್ ಪರೀಕ್ಷೆ ಮಾಡಿ ಹೇಳ್ದೊ. "ನೀವೇನ್ ಹೆದ್ರಬಡಿ, ಜೀವಕ್ಕೆ ಅಪಾಯ ಇಲ್ಲೆ. ಆಂದರೆ ಮಾತ್ರ ಎರಡೂ ಬೀಜ ನೀರಾವುಟು."

○

ಚಂದಾದಾರರಲ್ಲಿ ವಿನಂತಿ

ನೀವು ಕಳಿಸಬೇಕಾದ ಚಂದಾ ಹಣವು ಮನಿ ಆರ್ಡರ್‌ನ ಮುಖಾಂತರ ಅಥವಾ ಡಿ. ಡಿ. ಮುಖಾಂತರವಾಗಿರಲಿ. ಸ್ಥಳೀಯ ಚೆಕ್‌ಗಳನ್ನು ಮಾತ್ರ ಸ್ವೀಕರಿಸಲಾಗುವುದು. ದಯವಿಟ್ಟು ಚಂದದಾರರು ಸಹಕರಿಸಬೇಕಾಗಿ ವಿನಂತಿ.


ಚಂದಾ ವಿವರ	ವಾರ್ಷಿಕ	120/-
	ಅರ್ಧ ವಾರ್ಷಿಕ	60/-
ಜಾಹೀರಾತು	ಒಳ ಪುಟಕ್ಕೆ	1000/-
	ಕೊನೆ ಹೊರಪುಟಕ್ಕೆ	1500/-
	ಅರ್ಧ ಪುಟಕ್ಕೆ	500-
	ಕಾಲು ಪುಟಕ್ಕೆ	250/-

–ಸಂಪಾದಕಿ

K·R·N·N. 240

10-01-96 TCI Kar. 09592

ಪತ್ರಿಕೆ ಚೆನ್ನಾಗಿ ಯಾವ ಅಡೆ ತಡೆ ಇಲ್ಲದೆ ನಿರಾತಂಕವಾಗಿ ನಡೆಯಲೆಂದು ಹಾರೈಸುತ್ತೇವೆ



ಯಿಂದ :

ಆಜಡ್ಕ ಪೂವಯ್ಯ ಸೋಮಣ್ಣ ಮತ್ತು
ಕವಿತ ಸೋಮಣ್ಣ

ಮಕ್ಕಳು : ಜಿತೇಂದ್ರ, ದೀಪ್ತಿ

ದೂರವಾಣಿ : (08276) 63252

ಬೇಕಾಗಿದ್ದಾರೆ

"ಕೊಡಗು ಸಂಗಾತಿ"ಯ ಮಡಿಕೇರಿ ಕಛೇರಿ ಮತ್ತು ಕ್ಷೇತ್ರ ನಿರ್ವಾಹಕ
[Field Worker]ರಾಗಿ ಕೆಲಸ ನಿರ್ವಹಿಸಲು ದ್ವಿಚಕ್ರವಾಹನ ಚಾಲನೆ
ಅನುಭವವಿರುವ PUC ಮತ್ತು ಮೇಲ್ಪಟ್ಟ ವಿದ್ಯಾರ್ಹತೆಯುಳ್ಳ
ಯುವಕ/ಯುವತಿಯರು ಬೇಕಾಗಿದ್ದಾರೆ
ಆಸಕ್ತರು ಈ ಕೆಳಕಂಡ ಕಛೇರಿ ವಿಳಾಸವನ್ನು ಸಂಪರ್ಕಿಸುವುದು,

ಕೊಡಗು ಸಂಗಾತಿ

ನಂ. 35, ಸವಿತಾ ನಿಲಯ 1ನೇ ಕ್ರಾಸ್
4ನೇ ಬ್ಲಾಕ್, ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ
ಜಯಲಕ್ಷ್ಮಿಪುರಂ, ಮೈಸೂರು–12
ದೂರವಾಣಿ : 0821-516771

—ಸಂಪಾದಕಿ

ಓದುಗರ ಗಮನಕ್ಕೆ

ಪ್ರಿಯ ಓದುಗರೆ,

ಅನಿವಾರ್ಯ ಕಾರಣಗಳಿಂದ ಈ ಸಂಚಿಕೆಯಲ್ಲಿ ಧಾರವಾಹಿ "ಕರಿಚಿನ್ನ" ಪ್ರಕಟಗೊಳ್ಳದಿರುವುದಕ್ಕೆ ವಿಷಾದಿಸುತ್ತೇವೆ. ಓದುಗರು ಎಂದಿನಂತೆ ಸಹಕರಿಸಬೇಕಾಗಿ ವಿನಂತಿ.

—ಸಂಪಾದಕಿ

Printed by M K Thammaiah and Published byKodagu Sangathi on behalf of Pattada P. Sheelamani and Printed at ASHIRWAD PRINTERS 180/A, 6th Main, Vinayakanagar, Mysore-12 Published at Mysore, Editor PATTADA P. SHEELAMANI, No. 35 1st Cross, 4th Block (Near Divisional Telephone Office) Jayalakshmipuram, Mysore-570 012 Phone : 516771